# ಮೈಸೂರು ವಿಶ್ವವಿದ್ಯಾನಿಲಯ

## ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ

ಮಾನಸಗಂಗೋತ್ರಿ, ಮೈಸೂರು – 570 006

**ದೂರವಾಣಿ :0821–2419318/386/429** **e-mail : dswuommgm@gmail.com**


ಸಂಖ್ಯೆ:ವಿಕ್ಷೇಪಾ.2/15/1270/2019–20

ದಿನಾಂಕ: 07/11/2022

## ಸುತ್ತೋಲೆ

**ವಿಷಯ** : 2021–22 ಮತ್ತು 2022–23 ನೇ ಶೈಕ್ಷಣಿಕ ಸಾಲಿಗೆ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಿರುವ ಬಗ್ಗೆ.

*****

ಮೈಸೂರು ವಿಶ್ವವಿದ್ಯಾನಿಲಯದ ಅಂಗ ಕಾಲೇಜುಗಳು/ಸಂಯೋಜಿತ ಕಾಲೇಜುಗಳು/ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಹಾಗೂ ಸ್ನಾತಕೋತ್ತರ ಕೇಂದ್ರಗಳ ವಿದ್ಯಾರ್ಥಿಗಳಿಗೆ 2021–22 ಮತ್ತು 2022–23ನೇ ಶೈಕ್ಷಣಿಕ ಸಾಲಿನ 'ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆ'ಗಳನ್ನು, 2022ನೇ ಡಿಸೆಂಬರ್ ತಿಂಗಳ ಎರಡನೇ ವಾರದಲ್ಲಿ ಮೂರು ದಿವಸಗಳ ಕಾಲ ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯಲ್ಲಿ ಏರ್ಪಡಿಸಲಾಗುತ್ತದೆ. ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆ-1ರಲ್ಲಿ ಸೂಚಿಸಿರುವ ವಿವಿಧ ಕಲಾ ಪ್ರಕಾರಗಳ ತಂಡಗಳನ್ನು ಸ್ಪರ್ಧೆಗಳಲ್ಲಿ ಭಾಗವಹಿಸಲು ತಮ್ಮ ಕಾಲೇಜಿನಿಂದ/ಸ್ನಾತಕೋತ್ತರ ವಿಭಾಗದಿಂದ/ಸ್ನಾತಕೋತ್ತರ ಕೇಂದ್ರದಿಂದ ಕಳುಹಿಸಿಕೊಡಬೇಕಾಗಿ ತಿಳಿಸಲಾಗಿದೆ. ಸ್ಪರ್ಧೆಗಳಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಗಳಿಸುವ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಹಾಗೂ ಬಹುಮಾನವನ್ನು ಸಹ ನೀಡಲಾಗುವುದು. ಈ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದು, ವಿಶ್ವವಿದ್ಯಾನಿಲಯ ಸಾಂಸ್ಕೃತಿಕ ಆಯ್ಕೆ ಸಮಿತಿಯ ವತಿಯಿಂದ ಆಯ್ಕೆಗೊಂಡವರನ್ನು ಮಾತ್ರ ಮುಂದೆ ನಡೆಯುವ ದಕ್ಷಿಣ ವಲಯ ಯುವಜನೋತ್ಸವ (South Zone Youth Festival) ಸ್ಪರ್ಧೆಗಳಿಗೆ ವಿಶ್ವವಿದ್ಯಾನಿಲಯದ ಪ್ರತಿನಿಧಿಗಳಾಗಿ ಕಳುಹಿಸಿಕೊಡಲಾಗುವುದು.

### ತಂಡದಲ್ಲಿರಬೇಕಾದ ವಿದ್ಯಾರ್ಥಿಗಳ ಸಂಖ್ಯೆ:

ಕಾಲೇಜು/ಸ್ನಾತಕೋತ್ತರ ವಿಭಾಗಗಳು/ಸ್ನಾತಕೋತ್ತರ ಕೇಂದ್ರಗಳನ್ನು ಪ್ರತಿನಿಧಿಸುವ ವಿದ್ಯಾರ್ಥಿಗಳ ಸಂಖ್ಯೆ 33ರನ್ನು ಮೀರಬಾರದು. ವಿದ್ಯಾರ್ಥಿಗಳು ಒಂದಕ್ಕಿಂತ ಹೆಚ್ಚಿನ ಸ್ಪರ್ಧೆಗಳಲ್ಲಿ ಭಾಗವಹಿಸುವ ಪ್ರೌಢಿಮೆ, ಕೌಶಲ್ಯ, ಪ್ರತಿಭೆ ಮತ್ತು ಪ್ರದರ್ಶನ ಸಾಮರ್ಥ್ಯಗಳನ್ನು ಗಣನೆಗೆ ತೆಗೆದುಕೊಂಡು, ದಕ್ಷಿಣ ವಲಯ ಯುವಜನೋತ್ಸವದ ಸ್ಪರ್ಧೆಗಳಲ್ಲಿ ಭಾಗವಹಿಸುವ ತಂಡವನ್ನು ಆಯ್ಕೆ ಮಾಡಲಾಗುವುದು. ಈ ತಂಡದಲ್ಲಿ 33 ವಿದ್ಯಾರ್ಥಿಗಳು ಮಾತ್ರ ಇರಬೇಕಾಗಿರುವುದರಿಂದ ಕಾಲೇಜು/ಸ್ನಾತಕೋತ್ತರ ವಿಭಾಗ/ಸ್ನಾತಕೋತ್ತರ ಕೇಂದ್ರಗಳೂ ಸಹ 33 ವಿದ್ಯಾರ್ಥಿಗಳಿಗೆ ತಂಡವನ್ನು ಸೀಮಿತಗೊಳಿಸಬೇಕು.

### ಸ್ಪರ್ಧಿಗಳ ಅರ್ಹತೆ:

ವಿಶ್ವವಿದ್ಯಾನಿಲಯದ ನೇರ ಆಡಳಿತಕ್ಕೊಳಪಟ್ಟ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ವಿಭಾಗಗಳಲ್ಲಿ ಹಾಗೂ ಸ್ನಾತಕೋತ್ತರ ಕೇಂದ್ರಗಳಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಪೂರ್ಣಕಾಲಿಕ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮಾತ್ರ ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಯಾವುದೇ ಡಿಪ್ಲೊಮಾ, ಸ್ನಾತಕೋತ್ತರ ಡಿಪ್ಲೊಮಾ, ಅರೆಕಾಲಿಕ ವಿದ್ಯಾರ್ಥಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಈ ಸ್ಪರ್ಧೆಗಳಲ್ಲಿ ಭಾಗವಹಿಸುವಂತಿಲ್ಲ.

ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಯ ವಯಸ್ಸು ದಿನಾಂಕ: **01-07-2022**ಕ್ಕೆ 25 ವರ್ಷಗಳನ್ನು ಮೀರಿರಬಾರದು. ಈ ಬಗ್ಗೆ ಕಾಲೇಜು/ಸ್ನಾತಕೋತ್ತರ ವಿಭಾಗ/ ಸ್ನಾತಕೋತ್ತರ ಕೇಂದ್ರಗಳಿಂದ ಆಯ್ಕೆಯಾದ ವಿದ್ಯಾರ್ಥಿಯು ಪ್ರಾಂಶುಪಾಲರು/ ವಿಭಾಗದ ಮುಖ್ಯಸ್ಥರು/ಕೇಂದ್ರದ ನಿರ್ದೇಶಕರಿಂದ ದೃಢೀಕೃತ ಪರಿಚಯ ಪತ್ರವನ್ನು ತರಬೇಕು (ಇದು ಕಡ್ಡಾಯ).

*****2

**ತಂಡದ ಖರ್ಚು ವೆಚ್ಚ:**

ಕಾಲೇಜು/ಸ್ನಾತಕೋತ್ತರ ವಿಭಾಗ/ಸ್ನಾತಕೋತ್ತರ ಕೇಂದ್ರಗಳಿಂದ ಭಾಗವಹಿಸುವ ಸ್ಪರ್ಧಿಗಳು, ಸಹ ಕಲಾವಿದರು ಮತ್ತು ಮೇಲ್ವಿಚಾರಕರ ಪ್ರಯಾಣದ ಖರ್ಚು, ಮೈಸೂರಿನಲ್ಲಿ ವಸತಿ, ಭೋಜನ ವೆಚ್ಚ ಹಾಗೂ ಇತರೆ ಖರ್ಚುಗಳನ್ನು ಆಯಾಯ ಕಾಲೇಜು/ಸ್ನಾತಕೋತ್ತರ ವಿಭಾಗ/ಸ್ನಾತಕೋತ್ತರ ಕೇಂದ್ರದವರೇ ವ್ಯವಸ್ಥೆ ಮಾಡಿಕೊಳ್ಳಬೇಕಾಗಿರುತ್ತದೆ.

**ಪ್ರವೇಶಕ್ಕೆ ಕೊನೆಯ ದಿನಾಂಕ:**

ಅಂತರ ಕಾಲೇಜು ಸ್ಪರ್ಧೆಗಳಿಗೆ ಸ್ಪರ್ಧಿಗಳನ್ನು ಕಳುಹಿಸುವ ಕಾಲೇಜಿನ ಪ್ರಾಂಶುಪಾಲರು/ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರು/ಸ್ನಾತಕೋತ್ತರ ಕೇಂದ್ರದ ನಿರ್ದೇಶಕರುಗಳು ಆಯಾಯ ವಿದ್ಯಾರ್ಥಿಗಳ ವಿವರಗಳನ್ನೊಳಗೊಂಡ ಪಟ್ಟಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆ-1 ರಲ್ಲಿಯೇ (ಇದು ಕಡ್ಡಾಯ) ದಿನಾಂಕ: 02-12-2022ಕ್ಕೆ ಅಥವಾ ಅದಕ್ಕೂ ಮುಂಚಿತವಾಗಿಯೇ ಈ ನಿರ್ದೇಶನಾಲಯಕ್ಕೆ ಇ-ಮೇಲ್/ ಪತ್ರದ ಮೂಲಕ ತಲುಪುವಂತೆ ಕಳುಹಿಸಬೇಕು.

1. ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಯ ಉದ್ಘಾಟನಾ ಸಮಾರಂಭದ ದಿನಾಂಕವನ್ನು ಮುಂದೆ ತಿಳಿಸಲಾಗುವುದು.
2. ಅಂತರ ಕಾಲೇಜು ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಸಮಾರೋಪ ಸಮಾರಂಭದಂದು **ನಗದು ಬಹುಮಾನ ಹಾಗೂ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.**
3. ಅಗತ್ಯವಿದ್ದಲ್ಲಿ ಸ್ಪರ್ಧಿಗಳ ತಂಡದೊಡನೆ ಐದು ಜನಕ್ಕೆ ಮೀರದಂತೆ ಸಹ ಕಲಾವಿದರನ್ನು ಕಳುಹಿಸಬಹುದು. ಸಹ ಕಲಾವಿದರು ವಿದ್ಯಾರ್ಥಿಗಳಾಗಿರಬಹುದು/ ವಿದ್ಯಾರ್ಥಿಗಳಲ್ಲದವರಾಗಿರಬಹುದು. ಸಹ ಕಲಾವಿದರು ಬಹುಮಾನ ಮತ್ತು ಪ್ರಮಾಣ ಪತ್ರಗಳಿಗೆ ಅರ್ಹರಾಗಿರುವುದಿಲ್ಲ. ತಂಡದಲ್ಲಿ ವಿದ್ಯಾರ್ಥಿನಿಯರು ಇದ್ದಲ್ಲಿ, ಒಬ್ಬರು ಮಹಿಳಾ ಅಧ್ಯಾಪಕರನ್ನೊಳಗೊಂಡಂತೆ, ಇಬ್ಬರು ಅಧ್ಯಾಪಕರನ್ನು ಮೇಲ್ವಿಚಾರಕರನ್ನಾಗಿ ಕಳುಹಿಸಬೇಕು.

ನಿರ್ದೇಶಕ

DIRECTOR OF STUDENT WELFARE
UNIVERSITY OF MYSORE, MYSURU

ವಿಶೇಷ ಸೂಚನೆ:

1) ವಿದ್ಯಾರ್ಥಿಗಳು ತಮ್ಮ ಕಾಲೇಜು/ಸ್ನಾತಕೋತ್ತರ ವಿಭಾಗ/ಸ್ನಾತಕೋತ್ತರ ಕೇಂದ್ರಗಳಿಂದ ನೀಡಿರುವ ಗುರುತಿನ ಚೀಟಿ ಅಥವಾ ಪರಿಚಯ ಪತ್ರವನ್ನು ಕಡ್ಡಾಯವಾಗಿ ತರಬೇಕು.
2) ಸಲ್ಲಿಸುವ ಪ್ರವೇಶ ಪತ್ರದಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ ಆ ಬಗ್ಗೆ ಸಂಸ್ಥೆಯ ಮುಖ್ಯಸ್ಥರಿಂದ ಪ್ರಮಾಣ ಪತ್ರವನ್ನು ತರಬೇಕು.

---

ಗೆ,

ವಿಶ್ವವಿದ್ಯಾನಿಲಯದ ಎಲ್ಲಾ ಅಂಗ/ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು, ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು/ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರು, ಮೈಸೂರು, ಹಾಸನ, ಮಂಡ್ಯ ಮತ್ತು ಚಾಮರಾಜನಗರ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ <u>ದೂರವಾಣಿ ಸಂಖ್ಯೆಗಳು:</u> 0821-2419318/386/429

# ಮೈಸೂರು ವಿಶ್ವವಿದ್ಯಾನಿಲಯ

## ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ

## ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು

ಕಾಲೇಜು/ಸ್ನಾತಕೋತ್ತರ ವಿಭಾಗ.......................................................................................................................................................

ಹೆಸರು ಮತ್ತು ವಿಳಾಸ..................................................................................................................................................................

| ಕ್ರಮ ಸಂಖ್ಯೆ | ಸ್ಪರ್ಧೆಗಳ ಹೆಸರು | ಸ್ಪರ್ಧಿಗಳ ಸಂಖ್ಯೆ | ವಿದ್ಯಾರ್ಥಿಯ ಹೆಸರು | ಓದುತ್ತಿರುವ ತರಗತಿ | ಹುಟ್ಟಿದ ದಿನಾಂಕ |
|---|---|---|---|---|---|
| 1 | 2 | 3 | 4 | 5 | 6 |
| 1. | ಶಾಸ್ತ್ರೀಯ ಹಾಡುಗಾರಿಕೆ | 1 | | | |
| 2. | ಶಾಸ್ತ್ರೀಯ ವಾದ್ಯ ಸಂಗೀತ | 1 | | | |
| 3. | ಲಘು ಸಂಗೀತ (ಭಾವಗೀತೆ) | 1 | | | |
| 4. | ಪಾಶ್ಚಾತ್ಯ ಸಂಗೀತ | 1 | | | |
| 5. | ವೃಂದಗಾನ (ಭಾರತೀಯ) | 1 | | | |
| | [ಆರು ಜನ] | 2 | | | |
| | | 3 | | | |
| | | 4 | | | |
| | | 5 | | | |
| | | 6 | | | |
| 6. | ವೃಂದಗಾನ (ಪಾಶ್ಚಾತ್ಯ) | 1 | | | |
| | [ಆರು ಜನ] | 2 | | | |
| | | 3 | | | |
| | | 4 | | | |
| | | 5 | | | |
| | | 6 | | | |
| 7. | ಜನಪದ ನೃತ್ಯ (ಭಾರತೀಯ) | 1 | | | |
| | [ಹತ್ತು ಜನ] | 2 | | | |
| | | 3 | | | |
| | | 4 | | | |
| | | 5 | | | |
| | | 6 | | | |
| | | 7 | | | |
| | | 8 | | | |
| | | 9 | | | |
| | | 10 | | | |
| 8. | ಶಾಸ್ತ್ರೀಯ ನೃತ್ಯ | 1 | | | |
| 9. | ಚರ್ಚಾಸ್ಪರ್ಧೆ (ಇಂಗ್ಲಿಷ್)–ಪರ | 1 | | | |
| | –ವಿರೋಧ | 1 | | | |
| 10. | ಭಾಷಣ ಸ್ಪರ್ಧೆ (ಇಂಗ್ಲಿಷ್) | 1 | | | |
| 11. | ರಸಪ್ರಶ್ನೆ ಸ್ಪರ್ಧೆ (ಕ್ವಿಜ್) | 1 | | | |
| | [ಮೂರು ಜನ] | 2 | | | |
| | | 3 | | | |

| 1 | 2 | 3 | 4 | 5 | 6 |
|---|---|---|---|---|---|
| 12. | ಏಕಾಂಕ ನಾಟಕ | 1 | | | |
| | [ಒಂಬತ್ತು ಜನ] | 2 | | | |
| | | 3 | | | |
| | | 4 | | | |
| | | 5 | | | |
| | | 6 | | | |
| | | 7 | | | |
| | | 8 | | | |
| | | 9 | | | |
| 13. | ಪ್ರಹಸನ | 1 | | | |
| | [ಆರು ಜನ] | 2 | | | |
| | | 3 | | | |
| | | 4 | | | |
| | | 5 | | | |
| | | 6 | | | |
| 14. | ಮೂಕಾಭಿನಯ | 1 | | | |
| | [ಆರು ಜನ] | 2 | | | |
| | | 3 | | | |
| | | 4 | | | |
| | | 5 | | | |
| | | 6 | | | |
| 15. | ಅಣುಕು ಸ್ಪರ್ಧೆ | 1 | | | |
| 16. | ಏಕಪಾತ್ರಾಭಿನಯ | 1 | | | |
| 17. | ಸ್ಥಳದಲ್ಲಿ ಚಿತ್ರ ರಚನೆ | 1 | | | |
| 18. | ಕಾಗದದ ಚೂರುಗಳಿಂದ ಚಿತ್ರ ರಚನೆ | 1 | | | |
| 19. | ಭಿತ್ತಿಪತ್ರ ರಚನೆ | 1 | | | |
| 20. | ಮಣ್ಣಿನ ಮಾದರಿ ರಚನೆ | 1 | | | |
| 21. | ವ್ಯಂಗ್ಯಚಿತ್ರ ರಚನೆ | 1 | | | |
| 22. | ರಂಗೋಲಿ | 1 | | | |
| 23. | ಚಿತ್ರಗೀತೆ | 1 | | | |
| 24. | ಜನಪದ ಗೀತೆ | 1 | | | |
| 25. | ಚರ್ಚಾಸ್ಪರ್ಧೆ (ಕನ್ನಡ)–ಪರ | 1 | | | |
| | –ವಿರೋಧ | 1 | | | |
| 26. | ಭಾಷಣ ಸ್ಪರ್ಧೆ (ಕನ್ನಡ) | 1 | | | |

ಐದು ಜನ ಸಹ ಕಲಾವಿದರು ಮತ್ತು ಒಬ್ಬರು ಮೇನೇಜರ್, ತಂಡದಲ್ಲಿ ವಿದ್ಯಾರ್ಥಿನಿಯರು ಇದ್ದಲ್ಲಿ ಒಬ್ಬರು ಮಹಿಳಾ ಮೇನೇಜರ್ – ಇವರುಗಳ ಹೆಸರು ಮತ್ತು ವಿಳಾಸಗಳನ್ನು ಪ್ರವೇಶಾತಿ ಜೊತೆ ಕಳುಹಿಸುವುದು.

*ವಿಭಾಗದ ಮುಖ್ಯಸ್ಥರು / ಪ್ರಾಂಶುಪಾಲರ ಸಹಿ*
*(ಮೊಹರಿನೊಂದಿಗೆ)*

(ನಮೂನೆ)

## ದೃಢೀಕರಣ ಪತ್ರ

ಈ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಶ್ರೀ/ಕು...........................................................................ಎಂಬ ವಿದ್ಯಾರ್ಥಿಯು ಈ ಕಾಲೇಜು/ಸ್ನಾತಕೋತ್ತರ ವಿಭಾಗದಲ್ಲಿ...........................................................................ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಈ ವಿದ್ಯಾರ್ಥಿಯ ವಯಸ್ಸು ದಿನಾಂಕ.............................................ಕ್ಕೆ 25 ವರ್ಷಗಳಿಗಿಂತ ಕಡಿಮೆ ಇರುತ್ತದೆ.

*ಪ್ರಾಂಶುಪಾಲರು/ವಿಭಾಗದ ಮುಖ್ಯಸ್ಥರು*
(ಕಾಲೇಜು/ಸ್ನಾತಕೋತ್ತರ ವಿಭಾಗ/ಕೇಂದ್ರದ ಮುದ್ರೆ ಮತ್ತು ಸಹಿ)

*ವಿ.ಸೂ. : ದೃಢೀಕರಣ ಪತ್ರಗಳನ್ನು ಪ್ರತಿ ವಿದ್ಯಾರ್ಥಿಗೂ ಪ್ರತ್ಯೇಕವಾಗಿ ಕಳುಹಿಸಿಕೊಡಬೇಕು.*

* * *

## ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು

***ಸ್ಪರ್ಧೆಗಳ ಸಂಕ್ಷಿಪ್ತ ವಿವರಗಳು :***

| ಸ್ಪರ್ಧೆಗಳು | ಸ್ಪರ್ಧಿಗಳ ಸಂಖ್ಯೆ | ಸಹ ಕಲಾವಿದರ ಸಂಖ್ಯೆ | ಒಟ್ಟು | ಸಮಯಾವಕಾಶ |
|---|---|---|---|---|
| 1 | 2 | 3 | 4 | 5 |
| ***(ಅ) ಸಂಗೀತ :*** | | | | |
| 1. ಶಾಸ್ತ್ರೀಯ ಹಾಡುಗಾರಿಕೆ (ಹಿಂದೂಸ್ಥಾನಿ–ಕರ್ನಾಟಕ) | 1 | 2 | 3 | 15 ನಿಮಿಷಗಳು |
| 2. ಶಾಸ್ತ್ರೀಯ ವಾದ್ಯ ಸಂಗೀತ (ಹಿಂದೂಸ್ಥಾನಿ–ಕರ್ನಾಟಕ) | 1 | 2 | 3 | 15 ನಿಮಿಷಗಳು |
| 3. ಲಘು ಸಂಗೀತ–ಭಾವಗೀತೆ | 1 | 2 | 3 | 06 ನಿಮಿಷಗಳು |
| 4. ಪಾಶ್ಚಾತ್ಯ ಸಂಗೀತ | 1 | 2 | 3 | 06 ನಿಮಿಷಗಳು |
| 5. ವೃಂದಗಾನ (ಭಾರತೀಯ) | 6 | 3 | 9 | 10 ನಿಮಿಷಗಳು |
| 6. ವೃಂದಗಾನ (ಪಾಶ್ಚಾತ್ಯ) | 6 | 3 | 9 | 10 ನಿಮಿಷಗಳು |
| ***(ಆ) ನೃತ್ಯ :*** | | | | |
| 1. ಜನಪದ ನೃತ್ಯ (ಭಾರತೀಯ) | 10 | 5 | 15 | 10 ನಿಮಿಷಗಳು |
| 2. ಶಾಸ್ತ್ರೀಯ ನೃತ್ಯ | 1 | 3 | 4 | 15 ನಿಮಿಷಗಳು |
| ***(ಇ) ಸಾಹಿತ್ಯಕ ಸ್ಪರ್ಧೆಗಳು :*** | | | | |
| 1. ಚರ್ಚಾಸ್ಪರ್ಧೆ (ಇಂಗ್ಲಿಷ್) | 2 | – | 2 | 05 ನಿಮಿಷಗಳು |
| 2. ಭಾಷಣ ಸ್ಪರ್ಧೆ (ಇಂಗ್ಲಿಷ್) | 1 | – | 1 | 05 ನಿಮಿಷಗಳು |
| 3. ರಸಪ್ರಶ್ನೆ ಸ್ಪರ್ಧೆ (ಕ್ವಿಜ್) | 3 | – | 3 | – |
| ***(ಈ) ರಂಗ ಚಟುವಟಿಕೆಗಳು :*** | | | | |
| 1. ಏಕಾಂಕ ನಾಟಕ | 9 | 03 | 12 | 30 ನಿಮಿಷಗಳು |
| 2. ಪ್ರಹಸನ | 6 | 03 | 9 | 10 ನಿಮಿಷಗಳು |
| 3. ಮೂಕಾಭಿನಯ | 6 | 02 | 8 | 05 ನಿಮಿಷಗಳು |
| 4. ಅಣುಕು ಸ್ಪರ್ಧೆ | 1 | – | 1 | 05 ನಿಮಿಷಗಳು |
| 5. ಏಕಪಾತ್ರಾಭಿನಯ | 1 | – | 1 | 05 ನಿಮಿಷಗಳು |

| 1 | 2 | 3 | 4 | 5 |
|---|---|---|---|---|
| *(ಉ) ಲಲಿತ ಕಲೆಗಳು :* | | | | |
| 1. ಸ್ಥಳದಲ್ಲಿ ಚಿತ್ರ ರಚನೆ | 1 | – | 1 | 2 ಗಂ. 30 ನಿ. |
| 2. ಕಾಗದದ ಚೂರುಗಳಿಂದ ಚಿತ್ರ ರಚನೆ | 1 | – | 1 | 2 ಗಂ. 30 ನಿ. |
| 3. ಭಿತ್ತಿಪತ್ರ ರಚನೆ | 1 | – | 1 | 2 ಗಂ. 30 ನಿ. |
| 4. ಮಣ್ಣಿನ ಮಾದರಿ ರಚನೆ | 1 | – | 1 | 2 ಗಂ. 30 ನಿ. |
| 5. ವ್ಯಂಗ್ಯಚಿತ್ರ ರಚನೆ | 1 | – | 1 | 2 ಗಂ. 30 ನಿ. |
| 6. ರಂಗೋಲಿ | 1 | – | 1 | 2 ಗಂ. 30 ನಿ. |
| *(ಊ) ಅಂತರ ಕಾಲೇಜು ಸ್ಪರ್ಧೆಗಳು** :* | | | | |
| 1. ಚಿತ್ರಗೀತೆ (ಕನ್ನಡ) ಮತ್ತು (ಹಿಂದಿ) | 1 | – | 1 | 05 ನಿ. |
| 2. ಜನಪದ ಗೀತೆ | 1 | 1 | 2 | 05 ನಿ. |
| 3. ಚರ್ಚಾಸ್ಪರ್ಧೆ (ಕನ್ನಡ) | 2 | – | 2 | 05 ನಿ. (ತಲಾ) |
| 4. ಭಾಷಣ ಸ್ಪರ್ಧೆ (ಕನ್ನಡ) | 1 | – | 1 | 05 ನಿ. |

**ಈ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಪ್ರಮಾಣ ಪತ್ರಗಳನ್ನು ನೀಡಲಾಗುವುದು. ಈ ಸ್ಪರ್ಧೆಗಳಿಗೆ ದಕ್ಷಿಣ ವಲಯ ಯುವಜನೋತ್ಸವದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

*ವಿಶೇಷ ಸೂಚನೆ :*

1. ಒಟ್ಟು ಸ್ಪರ್ಧೆಗಳ ಸಂಖ್ಯೆಯನ್ನು 33ಕ್ಕೆ ಮಾತ್ರ ಸೀಮಿತಗೊಳಿಸಿರಬೇಕು.
2. ಒಂದು ಕಾಲೇಜಿನ/ಸ್ನಾತಕೋತ್ತರ ವಿಭಾಗದ ತಂಡದೊಡನೆ ಎಲ್ಲಾ ಸ್ಪರ್ಧೆಗಳಿಗೂ ಸೇರಿ ಐದು ಜನ ಸಹ ಕಲಾವಿದರಿಗೆ ಮಾತ್ರ ಅವಕಾಶವಿದೆ. ಸಹ ಕಲಾವಿದರು ವಿದ್ಯಾರ್ಥಿಗಳಾಗಿರುವುದು ಉತ್ತಮ. ಇಲ್ಲವಾದ್ದಲ್ಲಿ ಹೊರಗಿನವರಾಗಿರಬಹುದು.
3. ಸ್ಪರ್ಧೆಗಳಿಗೆ ಅವಶ್ಯಕವಾದ ವಾದ್ಯ, ಉಡುಪು, ಬಣ್ಣ ಮತ್ತಿತರ ಸಲಕರಣೆಗಳನ್ನು ಸ್ಪರ್ಧಿಗಳೇ ತರಬೇಕು.
4. ಸ್ಪರ್ಧೆಗಳಿಗೆ ಯಾವ ವಿಶೇಷ ರಂಗಸಜ್ಜಿಕೆಯನ್ನಾಗಲೀ, ಬೆಳಕಿನ ವ್ಯವಸ್ಥೆಯನ್ನಾಗಲೀ ಒದಗಿಸಲಾಗುವುದಿಲ್ಲ.
5. ಸೀಮಿತ ಸಂಖ್ಯೆಯ ಮೈಕು ಮತ್ತು ಪೀಠೋಪಕರಣಗಳನ್ನು ಮಾತ್ರ ಒದಗಿಸಲಾಗುವುದು.
6. ಸಹ ಕಲಾವಿದರಿಗೆ ಬಹುಮಾನ ಮತ್ತು ಅರ್ಹತಾ ಪತ್ರಗಳನ್ನು ನೀಡಲಾಗುವುದಿಲ್ಲ.
7. ತಂಡದ ವಿವರಗಳನ್ನು ಕಡ್ಡಾಯವಾಗಿ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆ-1 ರಲ್ಲಿ ಭರ್ತಿಮಾಡಿ ಕಳುಹಿಸಿಕೊಡಬೇಕು. ಇಲ್ಲವಾದ್ದಾಲ್ಲಿ ಸ್ಪರ್ಧೆಯಲ್ಲಿ ಭಾಗವಹಿಸಲು ತಮ್ಮ ವಿದ್ಯಾರ್ಥಿಗಳಿಗೆ ಅವಕಾಶವನ್ನು ನೀಡಲಾಗುವುದಿಲ್ಲ. ಈ ಬಗ್ಗೆ ವಿಭಾಗದ ಮುಖ್ಯಸ್ಥರು/ಪ್ರಾಂಶುಪಾಲರು ತಮ್ಮ ವೈಯಕ್ತಿಕ ಗಮನವನ್ನು ಹರಿಸುವುದು.
8. ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ವಯಸ್ಸಿನ ದೃಢೀಕರಣದ ಜೊತೆಗೆ ಕಾಲೇಜಿನ ಗುರುತಿನ ಚೀಟಿಯನ್ನು ಹಾಗೂ ಸ್ಪರ್ಧೆಗೆ ಭಾಗವಹಿಸಲು ನಮೂನೆ-1 ರಲ್ಲಿ ತಮ್ಮ ಹೆಸರನ್ನು ದಾಖಲಿಸಿ ತರಬೇಕು (ಇದು ಕಡ್ಡಾಯ).

ಸಹಿ/-

*ನಿರ್ದೇಶಕ*

ಕೆ.ಸಂ. 3380 – ಎಂಯುಪಿಎಂ – 150 ಪ್ರತಿಗಳು –17-06-2019(D-Apppgh)

ಮೈಸೂರು ವಿಶ್ವವಿದ್ಯಾನಿಲಯ

## ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ
## ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ನಿಯಮಗಳು

**1. ಶಾಸ್ತ್ರೀಯ ಹಾಡುಗಾರಿಕೆ**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿದೆ. ಇದಕ್ಕೆ ಸಂಬಂಧಿಸಿದಂತೆ ಇಬ್ಬರು ಸಹ ಕಲಾವಿದರ ನೆರವನ್ನು ಪಡೆಯಬಹುದು. ಪ್ರತಿ ಸ್ಪರ್ಧಿಗೂ 15 ನಿಮಿಷಗಳ ಕಾಲಾವಕಾಶ ಮಾತ್ರವಿರುತ್ತದೆ. ಹಿಂದೂಸ್ಥಾನಿ ಅಥವಾ ಕರ್ನಾಟಕ ಸಂಗೀತವನ್ನು ಮಾತ್ರ ಹಾಡಬೇಕು (ಚಿತ್ರಗೀತೆಗಳನ್ನು ಹಾಡುವಂತಿಲ್ಲ). ಸ್ವರ, ತಾಳ, ರಾಗ ಮತ್ತು ಕೃತಿಗಳ ಆಯ್ಕೆ ಹಾಗೂ ಒಟ್ಟಾರೆ ಪರಿಣಾಮಗಳ ಆಧಾರದ ಮೇಲೆ ತೀರ್ಪು ನೀಡಲಾಗುವುದು.

**2. ಶಾಸ್ತ್ರೀಯ ವಾದ್ಯ ಸಂಗೀತ**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿದೆ ಹಾಗೂ ಇಬ್ಬರು ಸಹ ಕಲಾವಿದರ ನೆರವು ಪಡೆಯಬಹುದಾಗಿದೆ. ಪ್ರತಿ ಸ್ಪರ್ಧಿಗೂ 15 ನಿಮಿಷಗಳವರೆಗೆ ಮಾತ್ರ ಕಾಲಾವಕಾಶವಿರುತ್ತದೆ. ಸ್ಪರ್ಧಿಗಳು ತಮ್ಮ ಸ್ವಂತ ವಾದ್ಯಗಳನ್ನು ತರಬೇಕು. ಹಿಂದೂಸ್ಥಾನಿ ಅಥವಾ ಕರ್ನಾಟಕ ಶೈಲಿಯ ವಾದನಕ್ಕೆ ಮಾತ್ರ ಅವಕಾಶವಿದೆ. ಸ್ವರ, ತಾಳ, ರಾಗದ ಆಯ್ಕೆ ಹಾಗೂ ಒಟ್ಟಾರೆ ಪರಿಣಾಮಗಳ ಆಧಾರದ ಮೇಲೆ ತೀರ್ಪು ನೀಡಲಾಗುವುದು.

**3. ಲಘು ಸಂಗೀತ (ಭಾವಗೀತೆ)**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿದೆ ಹಾಗೂ ಇಬ್ಬರು ಸಹ ಕಲಾವಿದರ ನೆರವು ಪಡೆಯಬಹುದಾಗಿದೆ. ಪ್ರತಿ ಸ್ಪರ್ಧಿಗೂ 6 ನಿಮಿಷಗಳವರೆಗೆ ಮಾತ್ರ ಕಾಲಾವಕಾಶವಿದೆ. ಪ್ರಸಿದ್ಧ ಕನ್ನಡ ಕವಿಗಳ ಗೀತೆಗಳನ್ನು ಮಾತ್ರ ಆರಿಸಿಕೊಳ್ಳಬೇಕು. ಸ್ವರ, ತಾಳ, ಕೃತಿಗಳ ಆಯ್ಕೆ ಹಾಗೂ ಒಟ್ಟಾರೆ ಪರಿಣಾಮದ ಆಧಾರದ ಮೇಲೆ ತೀರ್ಪು ನೀಡಲಾಗುವುದು.

**4. ಪಾಶ್ಚಾತ್ಯ ಸಂಗೀತ**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿದೆ ಹಾಗೂ ಇಬ್ಬರು ಸಹ ಕಲಾವಿದರ ನೆರವು ಪಡೆಯಬಹುದಾಗಿದೆ. ಪ್ರತಿ ಸ್ಪರ್ಧಿಗೂ 6 ನಿಮಿಷಗಳ ಕಾಲಾವಕಾಶವಿದೆ. ಇಂಗ್ಲಿಷ್ ಗೀತೆಗಳನ್ನು ಮಾತ್ರ ಹಾಡಬೇಕು. ತಾಳಬದ್ಧವಾದಾ ಸುಸಂಬದ್ಧವಾದ ಕೃತಿಗಳ ಆಯ್ಕೆ ಹಾಗೂ ಒಟ್ಟಾರೆ ಪರಿಣಾಮದ ಆಧಾರದ ಮೇಲೆ ತೀರ್ಪು ನೀಡಲಾಗುವುದು.

**5. ವೃಂದಗಾನ (ಭಾರತೀಯ)**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಆರು ಸ್ಪರ್ಧಿಗಳಿರುವ ಒಂದು ತಂಡಕ್ಕೆ ಮಾತ್ರ ಅವಕಾಶವಿದೆ. ಜೊತೆಗೆ ಮೂರು ಜನ ವಾದಕರನ್ನು ಸಹ ಕಲಾವಿದರನ್ನಾಗಿ ಸೇರಿಸಿಕೊಳ್ಳಬಹುದು. ಕನ್ನಡ ಅಥವಾ ಹಿಂದಿ ಭಾಷೆಯ ಎರಡು ಗೀತೆಗಳನ್ನು ಹಾಡಲು ಅವಕಾಶವಿದೆ. ಚಿತ್ರಗೀತೆಯನ್ನು ಪ್ರಸ್ತುತಪಡಿಸುವಂತಿಲ್ಲ. ಪ್ರತಿ ತಂಡಕ್ಕೆ 10 ನಿಮಿಷಗಳ ಕಾಲಾವಕಾಶವಿದ್ದು, ನಾಲ್ಕು ನಿಮಿಷಗಳಿಗೆ ಮೀರದಂತೆ ಸಿದ್ಧತೆಯ ಸಮಯವನ್ನು ಬಳಸಿಕೊಳ್ಳಬಹುದು. ಹಾಡುಗಾರಿಕೆಯ ಗುಣಮಟ್ಟಕ್ಕೆ ಪ್ರಾಧಾನ್ಯತೆ ನೀಡಲಾಗುವುದಲ್ಲದೆ, ಅಲಂಕಾರ, ವೇಷಭೂಷಣ ಅಥವಾ ನಾಟಕೀಯತೆಯನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ (ಒಂದು ರಾಷ್ಟ್ರ ಭಕ್ತಿಗೀತೆ ಹಾಗೂ ಒಂದು ಜನಪದ ಗೀತೆಯನ್ನು ಕಡ್ಡಾಯವಾಗಿ ಹಾಡಬೇಕು).

**6. ವೃಂದಗಾನ (ಪಾಶ್ಚಾತ್ಯ)**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಆರು ಸ್ಪರ್ಧಿಗಳಿರುವ ಒಂದು ತಂಡಕ್ಕೆ ಮಾತ್ರ ಅವಕಾಶವಿದೆ ಮತ್ತು ಮೂರು ವಾದಕರನ್ನು ಸಹ ಕಲಾವಿದರನ್ನಾಗಿ ಸೇರಿಸಿಕೊಳ್ಳಬಹುದಾಗಿದೆ. ಇಂಗ್ಲಿಷ್ ಭಾಷೆಯ ಹಾಡನ್ನು ಮಾತ್ರ ಹಾಡಬೇಕು. ಪ್ರತಿ ತಂಡಕ್ಕೂ 10 ನಿಮಿಷಗಳ ಕಾಲಾವಕಾಶವಿದ್ದು, ನಾಲ್ಕು ನಿಮಿಷಗಳಿಗೆ ಮೀರದಂತೆ ಸಿದ್ಧತೆಯ ಸಮಯವನ್ನು ಬಳಸಿಕೊಳ್ಳಬಹುದು. ಹಾಡುಗಾರಿಕೆಯ ಗುಣಮಟ್ಟಕ್ಕೆ ಮಾತ್ರ ಪ್ರಾಧಾನ್ಯತೆ ನೀಡಲಾಗುವುದೇ ಹೊರತು ವೇಷಭೂಷಣ, ಅಲಂಕಾರ, ನಾಟಕೀಯತೆಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

**7. ಚಿತ್ರಗೀತೆ**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿದೆ. ಪ್ರತಿ ಸ್ಪರ್ಧಿಗೂ 5 ನಿಮಿಷಗಳ ಕಾಲಾವಕಾಶವಿರುತ್ತದೆ. ಕನ್ನಡ ಅಥವಾ ಹಿಂದಿ ಭಾಷೆಯ ಒಂದು ಚಿತ್ರಗೀತೆಯನ್ನು ಮಾತ್ರ ಹಾಡಬೇಕು. ಗೀತೆಯ ಆಯ್ಕೆ ಮತ್ತು ಹಾಡುಗಾರಿಕೆಯ ಒಟ್ಟಾರೆ ಪರಿಣಾಮಗಳ ಆಧಾರದ ಮೇಲೆ ತೀರ್ಪು ನೀಡಲಾಗುವುದು.

**8. ಜನಪದ ಗೀತೆ**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿದೆ. ಪ್ರತಿ ಸ್ಪರ್ಧಿಗೂ 5 ನಿಮಿಷಗಳ ಕಾಲಾವಕಾಶವಿರುತ್ತದೆ ಮತ್ತು ಒಬ್ಬರು ಸಹ ಕಲಾವಿದರ ನೆರವನ್ನು ಪಡೆಯಲು ಅವಕಾಶವಿರುತ್ತದೆ. ಒಂದು ಕನ್ನಡ ಜನಪದ ಗೀತೆಯನ್ನು ಮಾತ್ರ ಹಾಡಬೇಕು. ಗೀತೆಯ ಆಯ್ಕೆ ಮತ್ತು ಅದರ ಒಟ್ಟಾರೆ ಪರಿಣಾಮಗಳನ್ನು ಆಧರಿಸಿ ತೀರ್ಪು ನೀಡಲಾಗುವುದು. ಹಿನ್ನೆಲೆ ವಿವರಣೆ ಅಥವಾ ಕಥನ ನಿರೂಪಣೆಯೂ ಸೇರಿದಂತೆ 5 ನಿಮಿಷಗಳ ಕಾಲಾವಕಾಶವನ್ನು ಮೀರಕೂಡದು.

**9. ಜನಪದ ನೃತ್ಯ**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ 10 ವಿದ್ಯಾರ್ಥಿಗಳಿರುವ ಒಂದು ತಂಡಕ್ಕೆ ಮಾತ್ರ ಅವಕಾಶವಿದೆ ಹಾಗೂ 5 ಜನ ವಾದಕರನ್ನು ಸಹ ಕಲಾವಿದರನ್ನಾಗಿ ಸೇರಿಸಿಕೊಳ್ಳಬಹುದಾಗಿದೆ. ಪ್ರತಿ ತಂಡಕ್ಕೆ 10 ನಿಮಿಷಗಳ ಕಾಲಾವಕಾಶ ಮಾತ್ರವಿರುತ್ತದೆ. ಯಾವುದಾದರೂ ಪ್ರಾದೇಶಿಕ ಜನಪದ ನೃತ್ಯ ಅಥವಾ ಪ್ರಾಚೀನ ನೃತ್ಯವನ್ನು ಮಾತ್ರ ಪ್ರದರ್ಶಿಸಬೇಕು (ಪಟಾಕುಣಿತ, ಪೂಜಾಕುಣಿತ, ಗೊರವರ ನೃತ್ಯ, ಬೀಸು ಕಂಸಾಳೆ, ಸೋಮನ ಕುಣಿತ, ಲಿಂಗದ ಬೀರರ ಕುಣಿತ [ವೀರಭದ್ರನ ನೃತ್ಯ], ಕೋಲಾಟ, ಕೀಲುಕುದುರೆ ಕುಣಿತ, ಮಾರೀ ಕುಣಿತ, ಭಾಗವಂತಿಕೆ ಮೇಳ ಮತ್ತು ತಮಟೆ ಮೇಳ ಮುಂತಾದವುಗಳು). ಎಲ್ಲರೂ ವಿದ್ಯಾರ್ಥಿಗಳಾಗಿರಬಹುದು ಅಥವಾ ವಿದ್ಯಾರ್ಥಿನಿಯರಾಗಿರಬಹುದು, ಇಲ್ಲವೆ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಂದ ಕೂಡಿರಬಹುದು. ನೃತ್ಯದ ತಾಳಬದ್ಧತೆ, ಅಭಿವ್ಯಕ್ತಿ, ಉಡುಪು, ಅಲಂಕಾರ ರಂಗಸಜ್ಜಿಕೆ, ಸಂಯೋಜನೆ ಮತ್ತು ಒಟ್ಟಾರೆ ಪರಿಣಾಮಗಳನ್ನು ಆಧರಿಸಿ ತೀರ್ಪು ನೀಡಲಾಗುವುದು. ಶಾಸ್ತ್ರೀಯ ನೃತ್ಯಕ್ಕೆ ಅವಕಾಶವಿಲ್ಲ. ರೆಕಾರ್ಡ್ ಸಂಗೀತ ಉಪಯೋಗಿಸುವಂತಿಲ್ಲ. ಅಂತರ ಕಾಲೇಜು ಸ್ಪರ್ಧೆಗಳಲ್ಲಿ ಪ್ರಥಮ/ದ್ವಿತೀಯ/ತೃತೀಯ ಸ್ಥಾನ ಗಳಿಸಿದರೂ ಸಹ ಯುವಜನೋತ್ಸವ ತಂಡದಲ್ಲಿ ಎಲ್ಲಾ ಸ್ಪರ್ಧಿಗಳಿಗೂ ಸ್ಥಾನ ನೀಡಲಾಗುವುದಿಲ್ಲ.

**10. ಶಾಸ್ತ್ರೀಯ ನೃತ್ಯ**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿರುತ್ತದೆ ಮತ್ತು ಗಾಯಕರೂ ಸೇರಿದಂತೆ 3 ಸಹ ಕಲಾವಿದರ ನೆರವು ಪಡೆಯಲು ಅವಕಾಶವಿದೆ. ಸ್ಪರ್ಧಿಗಳು ಕಥಕ್, ಕಥಕ್ಕಳಿ, ಭರತನಾಟ್ಯ ಮಣಿಪುರಿ, ಕೂಚುಪುಡಿ, ಮೋಹಿನಿಯಾಟ್ಟಂ, ನೃತ್ಯ ಪ್ರಕಾರಗಳಲ್ಲಿ ಒಂದನ್ನು ಪ್ರದರ್ಶಿಸಬಹುದು. ಪ್ರತಿ ಸ್ಪರ್ಧಿಗೂ ಸಿದ್ಧತೆ, ಪ್ರವೇಶ ಹಾಗೂ ನಿರ್ಗಮನಗಳನ್ನೊಳಗೊಂಡಂತೆ 15 ನಿಮಿಷಗಳ ಕಾಲಾವಕಾಶವಿರುತ್ತದೆ. ತಾಳ, ಅಭಿನಯ, ಉಡುಪು, ಅಲಂಕಾರ, ಪಾದಚಲನೆ ಹಾಗೂ ಒಟ್ಟಾರೆ ಪರಿಣಾಮಗಳ ಆಧಾರದ ಮೇಲೆ ತೀರ್ಪು ನೀಡಲಾಗುವುದು. ರೆಕಾರ್ಡ್ ಸಂಗೀತ ಉಪಯೋಗಿಸುವಂತಿಲ್ಲ.

**11. ಚರ್ಚಾಸ್ಪರ್ಧೆ (ಇಂಗ್ಲಿಷ್ ಮತ್ತು ಕನ್ನಡ)**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಇಂಗ್ಲಿಷ್ ಮತ್ತು ಕನ್ನಡ ಚರ್ಚಾಸ್ಪರ್ಧೆಗಳಿಗೆ ತಲಾ ಇಬ್ಬರಂತೆ ಸ್ಪರ್ಧಿಗಳಿಗೆ ಅವಕಾಶವಿರುತ್ತದೆ. ತಂಡದ ಒಬ್ಬ ಸ್ಪರ್ಧಿಯು ವಿಷಯದ ಪರವಾಗಿಯೂ ಮತ್ತೊಬ್ಬರು ವಿರೋಧವಾಗಿಯೂ ಮಾತನಾಡಬೇಕು. ವಿಷಯದ ಪರವಾಗಿ ಮತ್ತು ವಿರೋಧವಾಗಿ ಮಾತನಾಡುವವರ ಹೆಸರನ್ನು ಪ್ರವೇಶ ಪತ್ರದಲ್ಲಿಯೇ ಸೂಚಿಸಿರಬೇಕು ಮತ್ತು ಅವನ್ನು ಬದಲಾಯಿಸಲು ಅವಕಾಶವಿರುವುದಿಲ್ಲ. ಸ್ಪರ್ಧೆಯ ವಿಷಯವನ್ನು ಸ್ಪರ್ಧೆ ಪ್ರಾರಂಭವಾಗುವ 24 ಗಂಟೆಗಳಿಗಿಂತ ಮುಂಚೆ ಪ್ರಕಟಿಸಲಾಗುವುದು. ಪ್ರತಿ ಸ್ಪರ್ಧಿಗೂ 4+1 ನಿಮಿಷಗಳ ಕಾಲಾವಕಾಶವನ್ನು ಮಾತ್ರ ನೀಡಲಾಗುವುದು. ಚಿಂತನೆ, ವಿಷಯ ಪ್ರತಿಪಾದನೆ, ಸ್ವಂತಿಕೆ, ಭಾಷಾ ಅಭಿವ್ಯಕ್ತಿ ಹಾಗೂ ಒಟ್ಟಾರೆ ಪರಿಣಾಮಗಳ ಆಧಾರದ ಮೇಲೆ ತೀರ್ಪು ನೀಡಲಾಗುವುದು.

**12. ಭಾಷಣ ಸ್ಪರ್ಧೆ (ಇಂಗ್ಲಿಷ್ ಮತ್ತು ಕನ್ನಡ)**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಕನ್ನಡ ಮತ್ತು ಇಂಗ್ಲಿಷ್ ಭಾಷಣ ಸ್ಪರ್ಧೆಗೆ ತಲಾ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿರುತ್ತದೆ. ಸ್ಪರ್ಧೆಯ ವಿಷಯವನ್ನು ಸ್ಪರ್ಧೆ ಪ್ರಾರಂಭವಾಗುವ 24 ಗಂಟೆಗಳ ಮುಂಚೆ ಪ್ರಕಟಿಸಲಾಗುವುದು. ಪ್ರತಿ ಸ್ಪರ್ಧಿಗೂ 4+1 ನಿಮಿಷಗಳ ಕಾಲಾವಕಾಶವಿರುತ್ತದೆ. ವಿಷಯ ಪ್ರತಿಪಾದನೆ, ವಾಕ್ಚಾತುರ್ಯ ಮತ್ತು ಒಟ್ಟಾರೆ ಪರಿಣಾಮಗಳನ್ನು ಆಧರಿಸಿ ತೀರ್ಪು ನೀಡಲಾಗುವುದು.

**13. ರಸಪ್ರಶ್ನೆ ಸ್ಪರ್ಧೆ (ಕ್ವಿಜ್)**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಮೂವರು ಸ್ಪರ್ಧಿಗಳಿರುವ ಒಂದು ತಂಡಕ್ಕೆ ಮಾತ್ರ ಅವಕಾಶವಿರುತ್ತದೆ. ಬರವಣಿಗೆಯಲ್ಲಿ ನಡೆಯುವ ಪ್ರಾಥಮಿಕ ಸುತ್ತಿನಿಂದ ನಾಲ್ಕು ತಂಡಗಳನ್ನು ಮಾತ್ರ ಅಂತಿಮ ಸುತ್ತಿಗೆ ಆಯ್ಕೆ ಮಾಡಲಾಗುವುದು. ಅಂತಿಮ ಸುತ್ತಿನಲ್ಲಿ ಮೌಖಿಕ ಪ್ರಶ್ನೆಗಳು ಹಾಗೂ ದೃಶ್ಯ ಶ್ರವಣ ಪ್ರಶ್ನೆಗಳು ಇರುತ್ತವೆ. ಸ್ಪರ್ಧೆಯ ನಿರ್ದಿಷ್ಟ ನಿಯಮಗಳನ್ನು, ಮೌಲ್ಯಮಾಪನ ವಿಧಾನವನ್ನು, ಪ್ರತಿ ಉತ್ತರಕ್ಕೂ ಇರುವ ಕಾಲಾವಕಾಶ ಮುಂತಾದುವನ್ನು ಸ್ಪರ್ಧೆ ಪ್ರಾರಂಭವಾಗುವ ಮುನ್ನ ತಿಳಿಸಲಾಗುವುದು.

**14. ಏಕಾಂಕ ನಾಟಕ**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ 9 ಸ್ಪರ್ಧಿಗಳಿರುವ ಒಂದು ತಂಡಕ್ಕೆ ಮಾತ್ರ ಪ್ರವೇಶಾವಕಾಶವಿದೆ. ನಾಟಕವು ಕನ್ನಡ ಅಥವಾ ಇಂಗ್ಲಿಷ್ ಭಾಷೆಯಲ್ಲಿದ್ದು 30 ನಿಮಿಷಗಳ ಕಾಲಾವಕಾಶವಿರುತ್ತದೆ ಮತ್ತು ಮೂರು ಸಹ ಕಲಾವಿದರ ನೆರವನ್ನು ಪಡೆಯಬಹುದು. ರಂಗಸಿದ್ಧತೆಗಾಗಿ 10 ನಿಮಿಷಗಳಿಗೆ ಮೀರದಂತೆ ಕಾಲಾವಕಾಶ ನೀಡಲಾಗುವುದು. ನಾಟಕ ಪ್ರಾರಂಭಿಸಲು ಸೂಚನೆ ನೀಡಿದ ತಕ್ಷಣದಿಂದ ಅಥವಾ ಪೀಠಿಕೆ ಓದಲು ಪ್ರಾರಂಭಿಸಿದ ತಕ್ಷಣದಿಂದ ಸಮಯವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ನಾಟಕಕ್ಕೆ ಬೇಕಾದ ರಂಗಪರಿಕರಗಳನ್ನು ಅಲಂಕರಣ ಸಾಮಗ್ರಿಗಳನ್ನು ತಂಡದವರೇ ಒದಗಿಸಿಕೊಳ್ಳಬೇಕು. ಕನಿಷ್ಠ ಅವಶ್ಯಕತೆಗಳ ಹೊರತಾಗಿ ಯಾವ ವಿಶೇಷ ವ್ಯವಸ್ಥೆಯನ್ನೂ ನಾಟಕಕ್ಕಾಗಿ ಮಾಡಲಾಗುವುದಿಲ್ಲ. ಕಥಾವಸ್ತು, ಅಭಿನಯ, ರಂಗಕಲೆ ಮತ್ತು ಒಟ್ಟಾರೆ ಪರಿಣಾಮಗಳನ್ನು ಆಧರಿಸಿ ತೀರ್ಪು ನೀಡಲಾಗುವುದು. ಪ್ರದರ್ಶನ ಪ್ರಾರಂಭವಾಗುವ 2 ಗಂಟೆ ಮುನ್ನ ಮೇಲ್ವಿಚಾರಕರಲ್ಲಿ ಸ್ಪರ್ಧೆಗೆ ಹಾಜರಾಗಿರುವ ಬಗ್ಗೆ ವರದಿ ಮಾಡಿಕೊಳ್ಳತಕ್ಕದ್ದು. ಸಾರಾಂಶದ 3 ಪ್ರತಿಯನ್ನು 1 ಗಂಟೆ ಮುಂಚೆ ಸಲ್ಲಿಸಬೇಕು. ಭಾರತೀಯ ನಾಟಕವನ್ನು ಮಾತ್ರ ಪ್ರದರ್ಶಿಸಬೇಕು.

**15. ಪ್ರಹಸನ (ಸ್ಕಿಟ್)**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ 6 ಜನ ಸ್ಪರ್ಧಿಗಳಿರುವ ಒಂದು ತಂಡಕ್ಕೆ ಮಾತ್ರ ಪ್ರವೇಶಾವಕಾಶವಿದೆ. ಪ್ರತಿ ತಂಡಕ್ಕೂ 10 ನಿಮಿಷಗಳ ಕಾಲಾವಕಾಶ ಮಾತ್ರ ಇರುತ್ತದೆ ಹಾಗೂ ಮೂರು ಜನ ಸಹ ಕಲಾವಿದರ ನೆರವನ್ನು ಪಡೆಯಬಹುದು. ಅಲಂಕರಣ, ಉಡುಪು ಮತ್ತು ಹಿನ್ನೆಲೆ ಸಂಗೀತಗಳಿಗೆ ಅವಕಾಶವಿದೆ. ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ ಮಾತ್ರ ಪ್ರದರ್ಶನ ನೀಡಬೇಕು. ವಸ್ತು, ಅಭಿನಯ, ರಂಗಕಲೆ ಮತ್ತು ಒಟ್ಟಾರೆ ಪರಿಣಾಮಗಳ ಆಧಾರದ ಮೇಲೆ ತೀರ್ಪು ನೀಡಲಾಗುವುದು. ಪ್ರದರ್ಶನವು ಯಾವುದೇ ವ್ಯಕ್ತಿ ಮತ್ತು ಧರ್ಮವನ್ನು ದೂಷಿಸಲು ಅವಕಾಶ ನೀಡಕೂಡದು. (ಸಾರಾಂಶದ 3 ಪ್ರತಿಯನ್ನು 1 ಗಂಟೆ ಮುಂಚೆ ಸಲ್ಲಿಸಬೇಕು).

**16. ಮೂಕಾಭಿನಯ (ಮೈಮ್)**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ 6 ಜನರಿರುವ ಒಂದು ತಂಡಕ್ಕೆ ಮಾತ್ರ ಪ್ರವೇಶಾವಕಾಶವಿದೆ. ಪ್ರತಿ ತಂಡಕ್ಕೆ 5 ನಿಮಿಷಗಳ ಕಾಲಾವಕಾಶ ಮಾತ್ರವಿರುತ್ತದೆ ಹಾಗೂ ಇಬ್ಬರು ಸಹ ಕಲಾವಿದರ ನೆರವನ್ನು ಪಡೆಯಬಹುದು. ಆಲೋಚನೆ ಹಾಗೂ ಕಲ್ಪನಾ ಸಾಮರ್ಥ್ಯ, ಅಲಂಕರಣ, ವೇಷಭೂಷಣ ಮತ್ತು ಒಟ್ಟಾರೆ ಪರಿಣಾಮಗಳ ಆಧಾರದ ಮೇಲೆ ತೀರ್ಪು ನೀಡಲಾಗುವುದು (ಸಾರಾಂಶದ 3 ಪ್ರತಿಯನ್ನು 1 ಗಂಟೆ ಮುಂಚೆ ಸಲ್ಲಿಸಬೇಕು).

**17. ಚಿತ್ರ ರಚನೆ**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿದೆ. ತಮಗೆ ಇಷ್ಟವಾದ ವಿಷಯವನ್ನು ಕುರಿತು ಸ್ಥಳದಲ್ಲಿಯೇ ಚಿತ್ರ ಬರೆಯಬೇಕು. ಪ್ರತಿ ಸ್ಪರ್ಧಿಗೂ 2 ಗಂಟೆ 30 ನಿಮಿಷಗಳ ಕಾಲಾವಕಾಶ ನೀಡಲಾಗುವುದು. ಪ್ರತಿ ಸ್ಪರ್ಧಿ ತನಗೆ ಅವಶ್ಯಕವಾದ ಬಣ್ಣ, ಬ್ರಷ್, ಬರೆಯುವ ಹಲಗೆಗಳನ್ನು ತಾವೇ ತರಬೇಕು. ಕಾಗದವನ್ನು ಮಾತ್ರ ನೀಡಲಾಗುವುದು. ಸಹಾಯಕರಿಗೆ ಅವಕಾಶವಿಲ್ಲ.

**18. ಕಾಗದದ ಚೂರುಗಳಿಂದ ಚಿತ್ರ ರಚನೆ (ಕೊಲಾಜ್)**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿರುತ್ತದೆ. ವಿಷಯವನ್ನು ಸ್ಥಳದಲ್ಲಿಯೇ ಸೂಚಿಸಲಾಗುವುದು. ಪ್ರತಿ ಸ್ಪರ್ಧಿಗೂ 2 ಗಂಟೆ 30 ನಿಮಿಷಗಳ ಕಾಲಾವಕಾಶವಿದೆ. ಸ್ಪರ್ಧಿಗಳು ಅವಶ್ಯಕವಾದ ಕತ್ತರಿ, ಗೋಂದು, ಕಾಗದಗಳನ್ನು ತಾವೇ ತರಬೇಕು. ಸಹಾಯಕರಿಗೆ ಅವಕಾಶವಿಲ್ಲ.

**19. ಭಿತ್ತಿಪತ್ರ ರಚನೆ (Poster Making)**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿರುತ್ತದೆ ಮತ್ತು ಇಷ್ಟವಾದ ವಿಷಯವನ್ನು ಸ್ಪರ್ಧಿಗಳೇ ಆಯ್ಕೆ ಮಾಡಿಕೊಳ್ಳಬಹುದು. ಪ್ರತಿ ಸ್ಪರ್ಧಿಗೂ 2 ಗಂಟೆ 30 ನಿಮಿಷಗಳ ಕಾಲಾವಕಾಶವಿರುತ್ತದೆ. ಸ್ಪರ್ಧಿಗಳು ಅವಶ್ಯಕವಾದ ಬಣ್ಣ, ಬ್ರಷ್‌ಇತ್ಯಾದಿಗಳನ್ನು ತಾವೇ ತರಬೇಕು. ಸಹಾಯಕರಿಗೆ ಅವಕಾಶವಿಲ್ಲ.

**20. ಮಣ್ಣಿನ ಮಾದರಿ ರಚನೆ**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿರುತ್ತದೆ. ಸ್ಪರ್ಧಿಗಳು ತಮಗೆ ಇಷ್ಟವಾದ ಮಾದರಿಯನ್ನು ಆರಿಸಿಕೊಳ್ಳಬಹುದು. ಪ್ರತಿ ಸ್ಪರ್ಧಿಗೂ 2 ಗಂಟೆ 30 ನಿಮಿಷಗಳ ಕಾಲಾವಕಾಶವಿದೆ. ಅವಶ್ಯಕವಾದ ಮಣ್ಣನ್ನು ಸ್ಥಳದಲ್ಲಿಯೇ ನೀಡಲಾಗುವುದು. ಸಹಾಯಕರಿಗೆ ಅವಕಾಶವಿಲ್ಲ.

**21. ವ್ಯಂಗ್ಯಚಿತ್ರ ರಚನೆ**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿದೆ. ಪ್ರತಿ ಸ್ಪರ್ಧಿಗೂ ನೀಡುವ 2 ಗಂಟೆ 30 ನಿಮಿಷಗಳ ಅವಧಿಯಲ್ಲಿ ತಮಗೆ ಇಷ್ಟವಾದ ವ್ಯಂಗ್ಯಚಿತ್ರ ರಚಿಸಬೇಕು. ಅವಶ್ಯಕವಾದ ಬಣ್ಣ, ಬ್ರಷ್ ಇತ್ಯಾದಿಗಳನ್ನು ಸ್ಪರ್ಧಿಗಳೇ ತರಬೇಕು. ಕಾಗದವನ್ನು ಮಾತ್ರ ನೀಡಲಾಗುವುದು. ಸಹಾಯಕರಿಗೆ ಅವಕಾಶವಿಲ್ಲ.

**22. ರಂಗೋಲಿ ಸ್ಪರ್ಧೆ**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿರುತ್ತದೆ. ಪ್ರತಿ ಸ್ಪರ್ಧಿಗೂ ನೀಡುವ 2 ಗಂಟೆ 30 ನಿಮಿಷಗಳ ಅವಧಿಯಲ್ಲಿ ಸ್ಥಳದಲ್ಲಿಯೇ ರಂಗೋಲಿ ರಚಿಸಬೇಕು. ಅವಶ್ಯಕವಾದ ರಂಗೋಲಿಪುಡಿ, ಬಣ್ಣ, ಬ್ರಷ್‌ಗಳನ್ನು ಸ್ಪರ್ಧಿಗಳೇ ತರಬೇಕು. ಸಹಾಯಕರಿಗೆ ಅವಕಾಶವಿಲ್ಲ.

**23. ಅಣಕು ಸ್ಪರ್ಧೆ**

ಒಂದು ಕಾಲೇಜು/ಸ್ನಾತಕೋತ್ತರ ವಿಭಾಗದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿರುತ್ತದೆ. ಪ್ರತಿ ಸ್ಪರ್ಧಿಗೂ 5 ನಿಮಿಷಗಳ ಕಾಲಾವಕಾಶ ನೀಡಲಾಗುವುದು. ಒಟ್ಟಾರೆ ಪರಿಣಾಮದ ಆಧಾರದ ಮೇಲೆ ಹಾಗೂ ಅನುಕರಣೆಯ ಧ್ವನಿ, ಶಬ್ದದ ಮತ್ತು ಮಂಡನೆಯ ಪ್ರಭಾವದ ಮೇಲೆ ತೀರ್ಪು ನೀಡಲಾಗುವುದು. ಪ್ರಮುಖ ವ್ಯಕ್ತಿಗಳು, ಚಲನಚಿತ್ರ ತಾರೆಯರು, ಪಕ್ಷಿ–ಪ್ರಾಣಿ ಇತ್ಯಾದಿಗಳ ಧ್ವನಿಯನ್ನು ಅನುಕರಣೆ ಮಾಡಬೇಕು.

**24. ಏಕಪಾತ್ರಾಭಿನಯ**

ಒಂದು ಕಾಲೇಜು/ಸ್ನಾತಕೋತ್ತರ ಕೇಂದ್ರದಿಂದ ಒಬ್ಬ ಸ್ಪರ್ಧಿಗೆ ಮಾತ್ರ ಅವಕಾಶವಿರುತ್ತದೆ. ಪ್ರತಿ ಸ್ಪರ್ಧಿಗೂ 5 ನಿಮಿಷಗಳ ಕಾಲಾವಕಾಶ ನೀಡಲಾಗುವುದು. ಸ್ಪರ್ಧಿಯು ತನಗೆ ಬೇಕಾದ ಉಡುಪು ಇತ್ಯಾದಿಗಳನ್ನು ತಾವೇ ತರಬೇಕು. ತಕ್ಷಣದ ಪ್ರತಿಕ್ರಿಯೆ, ಅಭಿನಯ ಮತ್ತು ವಿಷಯದ ಆಧಾರ ಮತ್ತು ಒಟ್ಟು ಪರಿಣಾಮದ ಆಧಾರದ ಮೇಲೆ ತೀರ್ಪು ನೀಡಲಾಗುವುದು.

*ತೀರ್ಪು:* **ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಶ್ವವಿದ್ಯಾನಿಲಯವು ನೇಮಿಸುವ ತೀರ್ಪುಗಾರರ ತೀರ್ಮಾನವೇ ಅಂತಿಮವಾದುದು. ಸ್ಪರ್ಧಿಗಳೆಲ್ಲರೂ ಆ ತೀರ್ಪುಗಳಿಗೆ ಬದ್ಧರಾಗಬೇಕು. ಚರ್ಚೆ, ವಿವಾದಗಳಿಗೆ ಅವಕಾಶ ಇರುವುದಿಲ್ಲ.**

*ವಿ.ಸೂ.:*
1. ಯುವಜನೋತ್ಸವ ತಂಡವನ್ನು ಮೈಸೂರು ವಿಶ್ವವಿದ್ಯಾನಿಲಯ ನೇಮಿಸುವ ಸಾಂಸ್ಕೃತಿಕ ಸಮಿತಿಯು ಆಯ್ಕೆ ಮಾಡುವುದು. ಸಮಿತಿಯ ತೀರ್ಮಾನವೇ ಅಂತಿಮ ತೀರ್ಮಾನ.
2. ಈ ಅಂತರ ಕಾಲೇಜು ಸಾಂಸ್ಕೃತಿಕ ಸಾಹಿತ್ಯಕ ಸ್ಪರ್ಧೆಯ ವಿಜೇತರ ಪೈಕಿ 33 ಜನರನ್ನೊಳಗೊಂಡ ತಂಡವನ್ನು ದಕ್ಷಿಣ ವಲಯ ಯುವಜನೋತ್ಸವದಲ್ಲಿ ಮೈಸೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಲು ಆಯ್ಕೆ ಮಾಡಲಾಗುವುದು.
3. ಸಮೂಹ ಸ್ಪರ್ಧೆಗಳಲ್ಲಿ (Group) ಬಹುಮಾನ ಪಡೆದ ಎಲ್ಲಾ ವಿಜೇತರನ್ನು ಯುವಜನೋತ್ಸವ ತಂಡಕ್ಕೆ ಸೇರಿಸಲಾಗುವುದಿಲ್ಲ (ಈ ತಂಡಗಳನ್ನು ನಿಯೋಜಿತ ಸಮಿತಿಯು ಆಯ್ಕೆ ಮಾಡುತ್ತದೆ)
4. ಈ ಬಗ್ಗೆ ತಮ್ಮಿಂದ ಏನಾದರೂ ಸಲಹೆ ಸೂಚನೆಗಳಿದ್ದಲ್ಲಿ ಮುಕ್ತಮನಸ್ಸಿನಿಂದ ಈ ನಿರ್ದೇಶನಾಲಯಕ್ಕೆ ತಿಳಿಸಲು ಕೋರಲಾಗಿದೆ.
5. ಯಾವುದೇ ಸ್ಪರ್ಧೆಯನ್ನು ನಿಗದಿಪಡಿಸಿರುವ ಸಮಯಕ್ಕಿಂತ ಹೆಚ್ಚಿನ ಸಮಯವನ್ನು ಬಳಸಿಕೊಳ್ಳಬಾರದು ಇಲ್ಲವಾದ್ದಲ್ಲಿ ತಂಡವನ್ನು ಅನರ್ಹಗೊಳಿಸಲಾಗುವುದು.

ಸ್ಸಹಿ/–

*ನಿರ್ದೇಶಕ*

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ, ಕ್ರಾಫರ್ಡ್ ಭವನ, ಮೈಸೂರು – 570 005

website : www.uni-mysore.ac.in

ವಿಷಯ: 2022–23ನೇ ಶೈಕ್ಷಣಿಕ ಸಾಲಿನ 'ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆ'ಗಳ ಖರ್ಚು ವೆಚ್ಚಗಳ ಮೊತ್ತ ರೂ. 4,91,350/– ಗಳನ್ನು ಮುಂಗಡ ಹುಂಡಿಯ ಮೂಲಕ ಪಡೆಯುವ ಬಗ್ಗೆ.

ಪ್ರಸ್ತಾವನೆ: 2022–23ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಅಂಗ ಮತ್ತು ಸಂಯೋಜಿತ ಕಾಲೇಜುಗಳು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಹಾಗೂ ಸ್ನಾತಕೋತ್ತರ ಕೇಂದ್ರಗಳ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ವತಿಯಿಂದ 'ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆ'ಗಳನ್ನು 2022ರ ಡಿಸೆಂಬರ್ 08, 09 ಮತ್ತು 10ರಂದು ಆಯೋಜಿಸಲು ತಗಲಬಹುದಾದ ಅಂದಾಜು ವೆಚ್ಚ ರೂ. 4,91,350/– ಆಗಿರುತ್ತದೆ. ಸದರಿ ಮೊತ್ತವನ್ನು ಮುಂಗಡ ಹುಂಡಿಯ ಮೂಲಕ ಪಡೆದು ಸಂಬಂಧಿಸಿದವರಿಗೆ ಪಾವತಿಸಿ, ಕಾರ್ಯಕ್ರಮವನ್ನು ನಡೆಸಲು ಮಾನ್ಯ ಕುಲಪತಿಗಳು ಕಡತದಲ್ಲಿ ಒಪ್ಪಿರುವುದರಿಂದ ಈ ಆದೇಶ.

*****

**ವಿ.ವಿ. ಆದೇಶ ಸಂಖ್ಯೆ: ವಿಕ್ಷೇಪಾ 2/15/[illegible]/2019–20 ದಿನಾಂಕ: 31 – 11 –2022**

ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ, 2022–23ನೇ ಶೈಕ್ಷಣಿಕ ಸಾಲಿನ 'ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆ'ಗಳನ್ನು 2022ರ ಡಿಸೆಂಬರ್ 08, 09 ಮತ್ತು 10ರಂದು ಆಯೋಜಿಸಲು ತಗಲುವ ಅಂದಾಜು ವೆಚ್ಚಗಳ ಪೈಕಿ ತುರ್ತು ಖರ್ಚಿಗಾಗಿ ರೂ. 4,91,350/– ಗಳನ್ನು (ನಾಲ್ಕು ಲಕ್ಷದ ತೊಂಬತ್ತೊಂದು ಸಾವಿರದ ಮುನ್ನೂರ ಐವತ್ತು ರೂಪಾಯಿಗಳು ಮಾತ್ರ) ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರು ಮುಂಗಡ ಹುಂಡಿಯ ಮೂಲಕ ಪಡೆದು ಸಂಬಂಧಿಸಿದವರಿಗೆ ಪಾವತಿಸಿ, ಕಾರ್ಯಕ್ರಮವನ್ನು ನಡೆಸಲು ಅನುಮತಿಯನ್ನು ನೀಡಿದೆ.

| ಕ್ರಮ ಸಂಖ್ಯೆ | ವಿವರಗಳು | ಅಂದಾಜು ಮೊತ್ತ ರೂ.ಗಳಲ್ಲಿ |
|---|---|---|
| 1. | ನಗದು ಬಹುಮಾನ:<br>(ಅ) ಬಹುವ್ಯಕ್ತಿ ಸ್ಪರ್ಧೆಗಳು – 07<br>ಪ್ರಥಮ ಬಹುಮಾನ 3,000 x 7 = 21,000/-<br>ದ್ವಿತೀಯ ಬಹುಮಾನ 2,500 x 7 = 17,500/-<br>ತೃತೀಯ ಬಹುಮಾನ 2,000 x 7 = 14,000/- | 52,500/- |
| 2. | ನಗದು ಬಹುಮಾನ:<br>(ಆ) ಏಕವ್ಯಕ್ತಿ ಸ್ಪರ್ಧೆಗಳು – 19<br>ಪ್ರಥಮ ಬಹುಮಾನ 800 x 19 = 15,200/-<br>ದ್ವಿತೀಯ ಬಹುಮಾನ 600 x 19 = 11,400/-<br>ತೃತೀಯ ಬಹುಮಾನ 500 x 19 = 9,500/- | 36,100/- |
| 3. | ತೀರ್ಪುಗಾರರ ಸಂಭಾವನೆ:<br>ಬಹುವ್ಯಕ್ತಿ ಸ್ಪರ್ಧೆಗಳು–07 1250 x 7 x 3 = 26,250/–<br>ಏಕವ್ಯಕ್ತಿ ಸ್ಪರ್ಧೆ–19 1000 x 19 x3 = 57,000/- | 83,250/- |
| 4. | ವಿವಿಧ ಸಭಾಂಗಣಗಳಿಗೆ ಧ್ವನಿವರ್ಧಕ, ದೀಪಾಲಂಕಾರ ಹಾಗೂ ಜನರೇಟರ್ ವ್ಯವಸ್ಥೆಯ ವೆಚ್ಚ | 40,000/- |

| | | |
|---|---|---|
| 5. | ತೀರ್ಪುಗಾರರು, ಸಮಿತಿ ಸದಸ್ಯರು, ಸಿಬ್ಬಂದಿಗಳಿಗೆ ಮೂರು ದಿವಸಗಳ ಬೆಳಗಿನ ಲಘು ಉಪಹಾರ, ಕಾಫಿ/ಟೀ, ಮಧ್ಯಾಹ್ನದ ಊಟದ ವ್ಯವಸ್ಥೆ, ಮತ್ತು ಸಂಜೆ ಕಾಫಿ/ಟೀ ಮತ್ತು ಬಿಸ್ಕಟ್ಸ್ ವ್ಯವಸ್ಥೆಗಾಗಿ | 45,000/- |
| 6. | ವೀಕ್ಷಕರ ಸಂಭಾವನೆ<br>ಒಬ್ಬರಿಗೆ ದಿನಕ್ಕೆ 1500/- ರಂತೆ<br>1500 x 3 = 4,500/- | 4,500/- |
| 7. | ಪ್ರಮಾಣ ಪತ್ರಗಳ ಮುದ್ರಣ, ಲೇಖನ ಸಾಮಗ್ರಿ ವೆಚ್ಚ, ಬ್ಯಾನರ್ಸ್, ಫ್ಲೆಕ್ಸ್, ಸೈನ್ ಬೋರ್ಡ್ಸ್, ಕ್ವಿಜ್ ಸ್ಪರ್ಧೆಯ ತಯಾರಿ ಇತ್ಯಾದಿ ವೆಚ್ಚಗಳಿಗಾಗಿ | 50,000/- |
| 8. | ಆಹ್ವಾನಿತ ಗಣ್ಯರಿಗೆ ನೆನಪಿನ ಕಾಣಿಕೆ | 20,000/- |
| 9. | ಆಹ್ವಾನಿತ ಗಣ್ಯರಿಗೆ ಗೌರವ ಸಂಭಾವನೆ ಮತ್ತು ಪ್ರಯಾಣ ಭತ್ಯೆ | 60,000/- |
| 10. | ಕಾರ್ಯಕ್ರಮದ ಆಯೋಜನೆ ಮತ್ತು ನಿರ್ವಹಣೆಗೆ ಬೇಕಾದ ಖಾಸಗಿ ವಾಹನ ಸಾರಿಗೆ ಮತ್ತು ಸಂಭಾವನೆ ವೆಚ್ಚ | 15,000/- |
| 11. | ಕಾರ್ಯಕ್ರಮಗಳ ಫೋಟೋ ಮತ್ತು ವೀಡಿಯೋ ಚಿತ್ರೀಕರಣದ ವೆಚ್ಚ | 45,000/- |
| 12. | ಸಮಾರಂಭದ ಉದ್ಘಾಟನೆ ಹಾಗೂ ಸಮಾರೋಪದ ವೆಚ್ಚ ಮತ್ತು ಇತರೆ ಖರ್ಚುಗಳು | 40,000/- |
| | ಒಟ್ಟು ಮೊತ್ತ:<br>**(ನಾಲ್ಕು ಲಕ್ಷದ ತೊಂಬತ್ತೊಂದು ಸಾವಿರದ ಮುನ್ನೂರ ಐವತ್ತು ರೂಪಾಯಿಗಳು ಮಾತ್ರ)** | **4,91,350/-** |

ಮೇಲಿನ ಅಂದಾಜು ವೆಚ್ಚಪಟ್ಟಿಯ ಕ್ರಮ ಸಂಖ್ಯೆ: 01 ರಿಂದ 12 ರವರೆಗಿನ ಮೊತ್ತಗಳಲ್ಲಿ ವ್ಯತ್ಯಯವಾದಲ್ಲಿ, ಅದನ್ನು ಸದರಿ ಅಂದಾಜು ವೆಚ್ಚಗಳಲ್ಲಿ ಸರಿದೂಗಿಸಿಕೊಳ್ಳಲು ಹಾಗೂ ಈ ವೆಚ್ಚವನ್ನು 2022-23ನೇ ಸಾಲಿನ ಆಯವ್ಯಯದ **'129-ಅಂತರ ಕಾಲೇಜು ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳ ತರಬೇತಿ'** ಶೀರ್ಷಿಕೆಯಿಂದ ಭರಿಸಲು ಸಹ ಆದೇಶಿಸಿದೆ.

ಆದೇಶದ ಮೇರೆಗೆ

ಕುಲಸಚಿವ

ಗೆ,

1. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು
2. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
3. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನ ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ (ವಿಭಾಗೀಯ) ಕಚೇರಿ, ಮೈಸೂರು ವಿಭಾಗ, ಮೈಸೂರು
4. ಮಾನ್ಯ ಕುಲಪತಿಗಳ/ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
5. ರಕ್ಷಾ ಕಡತಕ್ಕೆ/ ಕಚೇರಿ ಪ್ರತಿ

ಸು)

# ಮೈಸೂರು ವಿಶ್ವವಿದ್ಯಾನಿಲಯ

## ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ

ಮಾನಸಗಂಗೋತ್ರಿ, ಮೈಸೂರು

## 2022-23ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು

# ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು

**( 2022ನೇ ಡಿಸೆಂಬರ್ 08, 09 ಮತ್ತು 10 )**

## ಉದ್ಘಾಟನಾ ಸಮಾರಂಭ

ಅಧ್ಯಕ್ಷತೆ :

**ಪ್ರೊ. ಹೆಚ್. ರಾಜಶೇಖರ್**

ಗೌರವಾನ್ವಿತ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಉದ್ಘಾಟನೆ :

**ಡಾ. ಪ್ರಿಯದರ್ಶಿನಿ**

ಖ್ಯಾತ ಬಹುಭಾಷಾ ಚಲನಚಿತ್ರ ಹಿನ್ನೆಲೆಗಾಯಕಿ ಹಾಗೂ ಚಲನಚಿತ್ರ ನಟಿ

ಮುಖ್ಯ ಅತಿಥಿ :

**ಶ್ರೀ ಧರ್ಮ ಕೀರ್ತಿರಾಜ್**

ಖ್ಯಾತ ಚಲನಚಿತ್ರ ನಾಯಕನಟರು

ಉಪಸ್ಥಿತರು :

**ಶ್ರೀ ಮಹೇಶ್ ಮಹದೇವ್**

ಖ್ಯಾತ ಚಲನಚಿತ್ರ ಸಂಗೀತ ನಿರ್ದೇಶಕರು, ಗೀತರಚನಾಕಾರರು ಹಾಗೂ ಗಾಯಕರು

**ಶ್ರೀ ಮಂಜು ಮಿಲನ್**

ಖ್ಯಾತ ಚಲನಚಿತ್ರ ನಟರು, ನಿರ್ದೇಶಕರು ಹಾಗೂ ನಿರ್ಮಾಪಕರು

ದಿನಾಂಕ : **08-12-2022** ಗುರುವಾರ ಸಮಯ : ಬೆಳಗ್ಗೆ **10-30** ಕ್ಕೆ

ಸ್ಥಳ : **ಮಾನವಿಕ ಸಭಾಂಗಣ** ಮಾನಸಗಂಗೋತ್ರಿ, ಮೈಸೂರು

**ಪ್ರೊ. ಬಿ.ಎಸ್. ಚಂದ್ರಶೇಖರ**
ನಿರ್ದೇಶಕರು
ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ
ಮಾನಸಗಂಗೋತ್ರಿ, ಮೈಸೂರು.



**ಶ್ರೀಮತಿ ವಿ.ಆರ್. ಶೈಲಜ** ಕೆ.ಎ.ಎಸ್.
ಮಾನ್ಯ ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು.

## ಸಾಂಸ್ಕೃತಿಕ ಜಾಥಾ ಚಾಲನೆ

ಸಮಯ : ಬೆಳಗ್ಗೆ 9-30ಕ್ಕೆ ( ದಿನಾಂಕ : 08-12-2022 )

ಸ್ಥಳ : ಕುವೆಂಪು ಪ್ರತಿಮೆಯ ಬಳಿ, ಮಾನಸಗಂಗೋತ್ರಿಯ ದಕ್ಷಿಣ ದ್ವಾರ, ಮೈಸೂರು ವಿಶ್ವವಿದ್ಯಾನಿಲಯ

# ತಮ್ಮೆಲ್ಲರಿಗೂ ಆದರದ ಸ್ವಾಗತ

# ಮೈಸೂರು ವಿಶ್ವವಿದ್ಯಾನಿಲಯ

## ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ

ಮಾನಸಗಂಗೋತ್ರಿ, ಮೈಸೂರು

## 2022 - 23ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು

# ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು

**( 2022ನೇ ಡಿಸೆಂಬರ್ 08, 09 ಮತ್ತು 10 )**

# ಸಮಾರೋಪ ಸಮಾರಂಭ

ಅಧ್ಯಕ್ಷತೆ :

**ಡಾ. ಸಂಗೀತಾ ಗಜಾನನ ಭಟ್**

ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮುಖ್ಯ ಅತಿಥಿಗಳು :

**ಪ್ರೊ. ನಾಗೇಶ್ ವಿ. ಬೆಟ್ಟಕೋಟೆ**

ಸನ್ಮಾನ್ಯ ಕುಲಪತಿಗಳು
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ
ಕಲೆಗಳ ವಿಶ್ವವಿದ್ಯಾಲಯ, ಮೈಸೂರು

**ಪ್ರೊ. ಸಿ. ರಾಮಸ್ವಾಮಿ**

ಸಂದರ್ಶಕ ಪ್ರಾಧ್ಯಾಪಕರು
ಬಾಬು ಜಗಜೀವನ್ ರಾಮ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ
ಮಾನಸಗಂಗೋತ್ರಿ, ಮೈಸೂರು

**ಪ್ರೊ. ಡಿ.ಕೆ. ಶ್ರೀನಿವಾಸ**

ನಿವೃತ್ತ ಪ್ರಾಧ್ಯಾಪಕರು, ಯುವರಾಜ ಕಾಲೇಜು, ಮೈಸೂರು

**ಶ್ರೀಮತಿ ಸವಿ ಪ್ರಕಾಶ್**

ನಿರೂಪಕರು, ಚಂದನ ವಾಹಿನಿ ದೂರದರ್ಶನ, ಬೆಂಗಳೂರು

**ದಿನಾಂಕ : 10-12-2022 ಶನಿವಾರ** **ಸಮಯ : ಸಂಜೆ 04-00 ಕ್ಕೆ**

**ಸ್ಥಳ : ಐ.ಎಂ.ಆರ್.ಸಿ. ಸಭಾಂಗಣ** ಮಾನಸಗಂಗೋತ್ರಿ, ಮೈಸೂರು

**ಶ್ರೀಮತಿ ಸುಷ್ಮಾ ಎಸ್.ಎನ್.**
ಸಹಾಯಕ ನಿರ್ದೇಶಕರು
ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ
ಮಾನಸಗಂಗೋತ್ರಿ. ಮೈಸೂರು

**ಪ್ರೊ. ಬಿ. ಎಸ್. ಚಂದ್ರಶೇಖರ**
ನಿರ್ದೇಶಕರು
ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ
ಮಾನಸಗಂಗೋತ್ರಿ. ಮೈಸೂರು

# ತಮ್ಮೆಲ್ಲರಿಗೂ ಆದರದ ಸ್ವಾಗತ

UNIVERSITY OF MYSORE
DIRECTORATE OF STUDENT WELFARE
MANASAGANGOTRI, MYSORE-570 006

Telephone 0821-2419318/386/429 E-mail : dswuommgm@gmail.com

## INTER-COLLEGIATE LITERARY AND CULTURAL COMPETITIONS

Following are the results of various competitions held on 08th, 09th and 10th December 2022

| Sl. No. | Name of the competitions | Prize | Name of the College/Department |
|---|---|---|---|
| MUSIC | | | |
| 1. | CLASSICAL VOCAL SOLO<br>ಶಾಸ್ತ್ರೀಯ ಹಾಡುಗಾರಿಕೆ | I Place | Amogha M Kashyap, University Fine Arts College, MGM |
| | | II Place | C.V. Shruthi, DOS in Mathematics, MGM |
| | | III Place | Bharamara K. Udupa, JSS Science College for Women, Saraswathipuam, Mysuru |
| 2. | CLASSICAL INSTRUMENTAL PERCUSSION & NON-PERCUSSION<br>ಶಾಸ್ತ್ರೀಯ ಸ್ವರವಾದ್ಯ ಸಂಗೀತ | I Place | Pruthvi Bhaskar & Team, St. Joseph First Grade College, Mysuru |
| | | II Place | Shruthi C.V, DOS in Mathematics, MGM |
| | | III Place | Varshitha, Govt. First Grade Collelge, Srirangapatna |
| 3. | LIGHT VOCAL SOLO (BHAVAGEETHE)<br>ಲಘು ಸಂಗೀತ | 1 Place | Pruthvi Bhaskar, St. Joseph First Grade College, Jayalakshmi Puram, Mysuru |
| | | II Place | Nishitha, A, DOS in Physics, MGM |
| | | III Place | Bhramara K. Udupa, J.S.S. College for Women Saraswathipuram, Mysuru |
| 4. | WESERN SOLO<br>ಪಾಶ್ಚಾತ್ಯ ಸಂಗೀತ | 1 Place | Jinson George, Maharaja's College, Mysuru |
| | | II Place | Nishmitha Fernandes, St. Joseph's First Grade College, Hunsur |
| | | III Place | Darshan Nayak, M Sharada Vilas College, Mysuru |
| 5. | GROP SONG – INDIAN<br>ವೃಂದಗಾನ (ಭಾರತೀಯ) | 1 Place | Nishitha A & Team, DOS in Physics, MGM |
| | | II Place | Priya K.V. & Team, Yuvaraja's College, Mysuru |
| | | III Place | Sannidhi Muthanna & Team, St. Joseph's College, J.L. Puram, Mysuru |
| 6. | GROUP SONG – WESTERN<br>ವೃಂದಗಾನ (ಪಾಶ್ಚಾತ್ಯ) | 1 Place | Cancelled due to shortage of minimum participants. |
| | | II Place | |
| | | III Place | |

10/12/22

Director of Student Welfare
University of Mysore, Mysore

| | | | |
|---|---|---|---|
| 7. | FILM HITS<br>ಚಿತ್ರಗೀತೆ | 1 Place | Priya K.V. Yuvaraja's College, Mysuru |
| | | II Place | Amogha M, Kashyap, University Fine Arts College, MGM |
| | | III Place | Chinmayi Vishwasena, DOS in Journalism & Mass Communication, MGM |
| 8. | FOLK SONGS<br>ಜಾನಪದ ಗೀತೆ | I Place | B.P. Manasa, University College of Fine Arts, MGM |
| | | II Place | N.M. Sandhya, DOS in Mathematics, MGM |
| | | III Place | Bharath Kumar, Govt. First Grade College, Hole Narasipura |
| DANCE | | | |
| 9. | FOLK DANCE (GROUP)<br>ಜಾನಪದ ನೃತ್ಯ | I Place | Maharani's Science College for Women, Mysuru |
| | | II Place | Maharaja's College, Mysuru |
| | | III Place | Manasagangotri, Mysuru |
| 10. | CLASSICAL DANCE<br>ಶಾಸ್ತ್ರೀಯ ನೃತ್ಯ | I Place | Sudhanva,M.L. Yuvaraja's College, Mysuru |
| | | II Place<br>II Place | Shamitha D, Sheshadripuram First Grade College,<br>Meghana, Maharaja's College, Mysuru |
| | | III Place<br>III Place | Keertha G, MMK & SDM College, Mysuru<br>Kotta Kota Kavya, R.I.E. Mysuru |
| 11. | DEBATE – ENGLISH<br>ಚರ್ಚಾಸ್ಪರ್ಧೆ – ಇಂಗ್ಲೀಷ್ | I Place | Sagar, S Govt. Arts & Post-graduate Colllege, Hassan |
| | | II Place | Nithya Muktha, S, Christ College, Mysore |
| | | III Place | Akarsh, B, DOS in Bio-technology, Manasagangotri, Mysore |
| 12. | ELOCUTION<br>ಭಾಷಣ ಸ್ಪರ್ಧೆ – ಇಂಗ್ಲೀಷ್ | I Place | Nisha, A, Maharani's Women College of Commerce & Management, Mysuru |
| | | II Place | Sagar, S, Govt. Arts & Post-graduate College, Hassan |
| | | III Place | Ekatha Shankaranarayana Bhat, DOS in Bio-technology, Manasagangotri, Mysuru |
| 13. | DEBATE – KANNADA<br>ಚರ್ಚಾಸ್ಪರ್ಧೆ – ಕನ್ನಡ | I Place | Ekatha Shankar Narayana Bhatta, DOS in Psychology, MGM |
| | | II Place | Hamsa, K.M. SBRR Mahajana First Grade College, Mysuru |
| | | III Place | Sanjana B.N, Govt. First Grade College for Women, K.R. Pet, Mandya |

10/12/22

Director of Student Welfare
University of Mysore, Mysore

| | | | |
|---|---|---|---|
| 14. | ELOCUTION – KANNADA<br>ಭಾಷಣ ಸ್ಪರ್ಧೆ – ಕನ್ನಡ | I Place | Divyashri, H.M. DOS in Journalism & Mass Communication, MGM |
| | | II Place | Ashok Kumar, DOS in Geology, MGM |
| | | III Place | Junedh, St. Joseph's College, Hunsur |
| 15. | QUIZ<br>ರಸಪ್ರಶ್ನೆ ಸ್ಪರ್ಧೆ | I Place | Kiran M.R, Team, DOS in English,MGM |
| | | II Place | Syed Mohammed Muzakir & Team, Yuvaraja's College, Mysore |
| | | III Place | Naveen Kumar & Team, Govt. First Grade College, K.R.Nagar |
| THEATRE: | | | |
| 16. | ONE ACT PLAY<br>ಏಕಾಂಕ ನಾಟಕ | I Place | Deekshith C.G. & Team, DOS In Computer Science, MGM |
| | | II Place | Sneha, V & Team, Yuvaraja's Collge, Mysuru |
| | | III Place | Abhayan R & Team, St. Joseph's First Grade College, Mysuru |
| 17. | SKIT<br>ಪ್ರಹಸನ | I Place | Akshara N Vishwadeep & Team, Yuvaraja's College, Mysuru |
| | | II Place | Dhanalakshmi & Team, GSSS. First Grade College, Mysuru |
| | | III Place | Manjuswamy K.C. & Team, St Joseph's First Grade College, Mysuru |
| 18. | MIME<br>ಮೂಕಾಭಿನಯ | I Place | Ajith , J & Team, St. Joseph First Grade College, Jayalakshmipuram, Mysuru |
| | | II Place | Manohar M & Team, Kuvempu Institute of Kannada Studies, MGM |
| | | III Place | Sneha V & Team, Yuvaraja's Collge, Mysuru |
| 19. | MIMICRY<br>ಅಣುಕು ಸ್ಪರ್ಧೆ | I Place | Shreekara L.P. CAVA , Mysuru |
| | | II Place | Manoj M.K. Seva Bharathi First Grade College, Shankarapura, Chamarajanagar |
| | | III Place | Vivek S.P. K. Puttaswamy First Grade College, Mysuru |
| 20. | MONO ACTING<br>ಏಕಪಾತ್ರಾಭಿನಯ | I Place | Sachidananda H.C .University Fine Arts College, MGM |
| | | II Place | Rajeshwari C.R Govt. Science College for Women, Myssuru |
| | | III Place | Yashaswini, Maharani's Science College for Women, Mysore |

10/12/20

Director of Student Welfare
University of Mysore, Mysore

| FINE ARTS: | | | |
|---|---|---|---|
| 21. | ON THE SPOT PAINTING<br>ಸ್ಥಳದಲ್ಲಿ ಚಿತ್ರ ರಚನೆ | I Place | Rakesh M.C, SBRR Mahajana First Grade College, Mysuru |
| | | II Place | Sanketh, Govt CAVA College, Mysuru |
| | | III Place | Shalini S.S. Hoysaleshwara Degree College, Arasikere, Hassan |
| 22. | COLLAGE MAKING<br>ಕಾಗದದ ಚೂರುಗಳಿಂದ ಚಿತ್ರ ರಚನೆ | I Place | Sanketh, CAVA. Mysuru |
| | | II Place | Nagesh H.T, HKV College, Maddur |
| | | III Place | Jyothilakshmi ,S SBRR Mahajana First Grade College, Mysuru |
| 23. | POSTER MAKING<br>ಜಾಹಿರಾತು ರಚನೆ | I Place | Kiran Kumar, M, Kuvempu Institute of Kannada Studies, Manasagangotri, Mysuru |
| | | II Place | Shri Darshan, B, Malavankar, CAVA, Mysuru |
| | | III Place | Pooja, N Govt. First Grade College, Srirangapattana |
| 24. | CLAY MODELLING<br>ಮಣ್ಣಿಮ ಮಾದರಿ ರಚನೆ | I Place | Yashwant, M, CAVA, Mysuru |
| | | II Place | Vijayakumar, M.S. Govt. First Grade College, Bannur |
| | | III Place | Vijay, C St. Joseph First Grade College, Hunsur |
| 25, | CARTOONING<br>ವ್ಯಂಗ್ಯ ಚಿತ್ರ ರಚನೆ | I Place | Shri Darshan B Malvankar, CAVA, Mysuru |
| | | II Place | Amogh H.S. Yuvaraja's College, Mysuru |
| | | III Place | Paul Cherish, St. Philomen's First Grade College,Mysuru |
| 26. | RANGOLI<br>ರಂಗೋಲಿ ಸ್ಪರ್ಧೆ | I Place | Sahana B.U, Adichunchanagiri First Grade College, H.D. Kote |
| | | II Place | Jyothilakshmi, S SBRR Mahajana First Grade College, Mysuru |
| | | III Place | Prakash D.P. Mahathma Gandhi B.Ed College, Mysuru |

Note:-

- The Prize winners mentioned in the list should compulsorily bring the Identity Card duly signed by the respective Principals of concerned Colleges/Head of the Departments.
- The Prize winners must collect the prize amount within 07 days from the announcement of results.

Date: 10-12-2022
Place: Mysuru

(Dr. B.S. CHANDRASHEKARA)
DIRECTOR
Director of Student Welfare
University of Mysore, Mysore

HJS)

ಪ್ರಜಾವಾಣಿ | ಶುಕ್ರವಾರ • ಡಿಸೆಂಬರ್ 9, 2022 | ಮೈಸೂರು ನಗರ | 4A

ಅಂತರ ಕಾಲೇಜು ಸಾಹಿತ್ಯಿಕ, ಸಾಂಸ್ಕೃತಿಕ ಸ್ಪರ್ಧೆ ಉದ್ಘಾಟನೆ

# ಸ್ಪರ್ಧೆಗಳಲ್ಲಿ ಪ್ರತಿಭೆಯ 'ಚಿಲುಮೆ'

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ವಿ.ವಿ. ಮುಖ್ಯ ದ್ವಾರದಿಂದ ಸಭಾ ವೇದಿಕೆಯವರೆಗೆ ಮೆರವಣಿಗೆ
- ಮೂರು ದಿನಗಳವರೆಗೆ ವಿವಿಧ ಸ್ಪರ್ಧೆ
- ಜೀವನ ಮೌಲ್ಯ ತಿಳಿಸುವ ಪಠ್ಯೇತರ ಚಟುವಟಿಕೆ



ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯದಿಂದ ಗುರುವಾರ ನಡೆದ ಕಾರ್ಯಕ್ರಮವನ್ನು ಡಾ.ಪ್ರಿಯದರ್ಶಿನಿ ಉದ್ಘಾಟಿಸಿದರು. ಪ್ರೊ.ಬಿ.ಎಸ್.ಚಂದ್ರಶೇಖರ, ಮಹೇಶ್ ಮಹದೇವ್, ಬಿ.ಆರ್.ಶೈಲಜಾ, ಧರ್ಮ ಕೀರ್ತಿರಾಜ್, ಮಂಜು ಮಿಲನ್, ಸುಷ್ಮಾ ಇದ್ದರು –ಪ್ರಜಾವಾಣಿ ಚಿತ್ರ

ಮೈಸೂರು: ತಳಿರು ತೋರಣಗಳಿಂದ ಸಿಂಗಾರಗೊಂಡಿದ್ದ ಕಾಲೇಜು ಆವರಣ. ಸುಶ್ರಾವ್ಯ ಸಂಗೀತಕ್ಕೆ ತಲೆದೂಗಿದ ಪ್ರೇಕ್ಷಕರು. ನೃತ್ಯ, ಹಾಡು, ಚಿತ್ರ ರಚನೆ ಹೀಗೆ... ಕಲಾವಿದರಿಂದ ಕಳೆಗಟ್ಟಿದ ಪ್ರತಿಭಾ ವೇದಿಕೆ.

ಈ ಸಂಭ್ರಮದ ಕ್ಷಣಗಳಿಗೆ ಮೈಸೂರು ವಿಶ್ವವಿದ್ಯಾಲಯದ ಅಂತರ ಕಾಲೇಜು ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸ್ಪರ್ಧೆ ಸಾಕ್ಷಿಯಾಯಿತು.

ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದಿಂದ ಮಾನಸ ಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ಆಯೋಜಿಸಿದ್ದ ಸ್ಪರ್ಧೆಗಳಲ್ಲಿ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೂರು ದಿನಗಳವರೆಗೆ ಸ್ಪರ್ಧೆ ನಡೆಯಲಿದೆ. ಮೊದಲ ದಿನವಾದ ಗುರುವಾರ ಶಾಸ್ತ್ರೀಯ ಸಂಗೀತ, ಚಿತ್ರ ರಚನೆ, ಜನಪದ ನೃತ್ಯ, ವ್ಯಂಗ್ಯ ಚಿತ್ರ ರಚನೆ, ರಸಪ್ರಶ್ನೆ, ಪಾಶ್ಚಾತ್ಯ ಸಂಗೀತ, ವೃಂದ ಗಾನ, ಜನಪದ ಗೀತೆ, ಲಘು ಸಂಗೀತ ವಿಭಾಗದಲ್ಲಿ ಸ್ಪರ್ಧೆ ನಡೆಯಿತು.

ಮೈಸೂರು ವಿಶ್ವವಿದ್ಯಾಲಯದ ಮುಖ್ಯ ದ್ವಾರದಿಂದ ಸಭಾ ವೇದಿಕೆಯ ವರೆಗೆ ಪೂಜಾ ನೃತ್ಯ ಮತ್ತು ಡೊಳ್ಳು ಕುಣಿತ ತಂಡಗಳೊಂದಿಗೆ ಮೆರವಣಿಗೆ ಸಾಗಿತು. ನಗಾರಿ ಮತ್ತು ಡೋಲಿನ ಸದ್ದಿಗೆ ವಿದ್ಯಾರ್ಥಿಗಳ ಜೊತೆಗೆ ಸಿಬ್ಬಂದಿಯೂ ಹೆಜ್ಜೆ ಹಾಕಿದ್ದು ವಿಶೇಷವಾಗಿತ್ತು.

**ಉದ್ಘಾಟನೆ:** ಹಿನ್ನಲೆ ಗಾಯಕಿ ಪ್ರಿಯದರ್ಶಿನಿ ಉದ್ಘಾಟಿಸಿ ಮಾತ ನಾಡಿ, 'ಸ್ಪರ್ಧೆ ಕಲಿಯುವಿಕೆಯ ಒಂದು ಭಾಗ. ಸೋಲು–ಗೆಲುವು ಜೀವನದ ಅನೇಕ ಪಾಠಗಳನ್ನು ತಿಳಿಸುತ್ತದೆ. ಕಾಲೇಜು ಜೀವನದಲ್ಲಿ ಪಠ್ಯಗಳು ಮಾಹಿತಿ ಕಲಿಸುತ್ತವೆ. ಪಠ್ಯೇತರ ಚಟುವಟಿಕೆಗಳು ಜೀವನ ಮೌಲ್ಯಗಳನ್ನು ತಿಳಿಸುತ್ತವೆ' ಎಂದರು.

ಕುಲಸಚಿವೆ ವಿ.ಆರ್.ಶೈಲಜಾ ಮಾತನಾಡಿ, 'ನಾಡಿನ ಸಂಸ್ಕೃತಿ ಎಷ್ಟು ಶ್ರೀಮಂತವಾಗಿದೆ ಎಂಬುದು ಇತ್ತೀಚಿನ ಚಲನಚಿತ್ರಗಳಲ್ಲಿ ಕಾಣಸಿಗುತ್ತಿದೆ. ನಮ್ಮ ಸಂಸ್ಕೃತಿ ತಿಳಿಯುವುದರೊಂದಿಗೆ, ಅವುಗಳ ಬಗ್ಗೆ ಇತರರಿಗೆ ಮನದಟ್ಟು ಮಾಡುವ ಕಾರ್ಯ ಆಗಬೇಕು' ಎಂದು ಆಶಿಸಿದರು.

'ವಿದ್ಯಾರ್ಥಿಗಳಲ್ಲಿ ಸಾಹಿತ್ಯಾಸಕ್ತಿ ಕಡಿಮೆಯಾಗಿದೆ. ರಾಷ್ಟ್ರಕವಿ ಕುವೆಂಪು ಓಡಾಡಿದ ಮಣ್ಣಿನಲ್ಲಿ ಅಧ್ಯಯನ ಮಾಡುತ್ತಿರುವ ನಾವು, ಪುಸ್ತಕಗಳನ್ನು ಓದಿ ಜ್ಞಾನ ಹೆಚ್ಚಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ನಟ ಧರ್ಮ ಕೀರ್ತಿರಾಜ್, ವಿದ್ಯಾರ್ಥಿ ಕ್ಷೇಮಪಾಲನ ವಿಭಾಗದ ನಿರ್ದೇಶಕ ಪ್ರೊ.ಬಿ.ಎಸ್.ಚಂದ್ರಶೇಖರ, ನಿರ್ದೇಶಕಿ ಎಸ್.ಎನ್.ಸುಷ್ಮಾ, ಮಹೇಶ್ ಮಹದೇವ್, ಮಂಜು ಮಿಲನ್ ಇದ್ದರು.

ಕನ್ನಡಪ್ರಭ
ಶುಕ್ರವಾರ 9.12.2022

# ಮೈಸೂರು ವಿವಿ ವಿ ಸಾಹಿತ್ಯಕ, ಸಾಂಸ್ಕೃತಿಕ ಉತ್ಸವ ಆರಂಭ



• **ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶ ನಾಲಯ ಏರ್ಪಡಿಸಿರುವ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಉತ್ಸವಕ್ಕೆ ಗುರುವಾರ ಮಾನಸ ಗಂಗೋತ್ರಿಯಮಾನವಿಕಸಭಾಂಗಣದಲ್ಲಿ ಚಾಲನೆ ದೊರೆಯಿತು.

ಚಲನಚಿತ್ರ ಹಿನ್ನೆಲೆ ಗಾಯಕಿ ಡಾ.ಪ್ರಿಯ ದರ್ಶಿನಿ ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿ, ನನಗೆ ಸಂಗೀತದಲ್ಲಿ ಸಂಶೋಧನೆ ಅವಕಾಶ ಮಾಡಿ ಕೊಟ್ಟಿದ್ದೆ ಮೈಸೂರು ವಿವಿ ಎಂದರು.

ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸಬೇಕು. ಸೋಲು- ಗೆಲುವು ನಂತರ, ಅದರಲ್ಲಿ ಸಿಗುವ ಅನುಭವ ನಮ್ಮಲ್ಲಿ ಯಾವ ಯಾವ ಪ್ರತಿಭೆ ಅಡಗಿವೆ ಎನ್ನುವುದನ್ನು ತೋರಿಸುತ್ತದೆ ಎಂದು ಅವರು ಹೇಳಿದರು. ಚಲನಚಿತ್ರ ನಟ ಧರ್ಮಕೀರ್ತಿರಾಜ್ ಮಾತನಾಡಿದರು. ಕುಲಸಚಿವೆ ವಿ.ಆರ್. ಶೈಲಜಾ, ಸಂಗೀತ ನಿರ್ದೇಶಕ ಮಹೇಶ್ ಮಹದೇವ್, ನಟ ಮಂಜು ಮಿಲನ್, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕ ಪ್ರೊ. ಬಿ ಎಸ್ ಚಂದ್ರಶೇಖರ, ಸಹಾಯಕ ನಿರ್ದೇಶಕಿ ಸುಷ್ಮಾ ಮತ್ತಿತರು ಇದ್ದರು.

# ಮೈಸೂರು ವಿವಿ ಸಾಹಿತ್ಯಕ, ಸಾಂಸ್ಕೃತಿಕ ಸ್ಪರ್ಧೆಗಳಿಗೆ ಚಾಲನೆ

## ಜ್ಞಾನಕ್ಕಾಗಿ ಅಧ್ಯಯನ ಮಾಡಿದರೆ ಅವಕಾಶ ಹುಡುಕಿಬರುತ್ತೆ: ನಟಿ ಪ್ರಿಯದರ್ಶಿನಿ

■ **ವಿಕ ಸುದ್ದಿಲೋಕ** ಮೈಸೂರು

ಜ್ಞಾನಕ್ಕಾಗಿ ಅಧ್ಯಯನ ಮಾಡಿದರೆ ಜೀವನದಲ್ಲಿ ಅವಕಾಶಗಳು ಹುಡುಕಿಕೊಂಡು ಬರುತ್ತವೆ ಎಂದು ಹಿನ್ನೆಲೆ ಗಾಯಕಿ, ನಟಿ ಡಾ.ಪ್ರಿಯದರ್ಶಿನಿ ಹೇಳಿದರು.

ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದಿಂದ ಮಾನಸ ಗಂಗೋತ್ರಿಯ ಮಾನವಿಯ ಸಭಾಂಗಣದಲ್ಲಿ ಏರ್ಪಡಿಸಿದ್ದ 2022-23ನೇ ಶೈಕ್ಷಣಿಕ ಸಾಲಿನ ವಿಶ್ವ ವಿದ್ಯಾಲಯ ಮಟ್ಟದ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

''ವಿದ್ಯಾರ್ಥಿಗಳಲ್ಲಿ ಅಗಾಧ ಪ್ರತಿಭೆ ಇದೆ. ಅದನ್ನು ಹೊರತರಲು ಶಾಲಾ-ಕಾಲೇಜಿನ ವೇದಿಕೆಗಳು ಸೂಕ್ತವಾಗಿರುತ್ತವೆ. ವಿದ್ಯಾರ್ಥಿಗಳು ಓದಿನ ಜತೆಯಲ್ಲಿ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು. ನಾವು ಮಾಡುವ ಕೆಲಸದಲ್ಲಿ ಯಶಸ್ಸು ಕಾಣಬೇಕಾದರೆ ಉತ್ತಮ ರೀತಿಯಲ್ಲಿ ಆಲೋಚಿಸಿ ಕೆಲಸ ಮಾಡಬೇಕು,'' ಎಂದು ತಿಳಿಸಿದರು.

''ಸ್ಪರ್ಧಾತ್ಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿ ಜೀವನದಲ್ಲಿಯೇ ಭಯ ವಾತಾವರಣ ಕಡಿಮೆಯಾಗುತ್ತದೆ. ಅಲ್ಲದೇ ಸಮಾಜದಲ್ಲಿಸ್ಫೂರ್ತಿದಾಯಕವಾಗಿ ಬದುಕಲು ಅವಕಾಶಗಳು ಮಾರ್ಗದರ್ಶನ ಸಿಗುತ್ತದೆ,'' ಎಂದರು.




**ಮಾನಸಗಂಗೋತ್ರಿಯ ಮಾನವಿಯ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು ಕಾರ್ಯಕ್ರಮವನ್ನು ಹಿನ್ನೆಲೆ ಗಾಯಕಿ ಡಾ.ಪ್ರಿಯದರ್ಶಿನಿ ಉದ್ಘಾಟಿಸಿದರು.**

ನಟ ಧರ್ಮ ಕೀರ್ತಿರಾಜ್ ಮಾತನಾಡಿ, ''ಮೈಸೂರಿನಿಂದ ನನ್ನ ಸಿನಿಮಾ ಪಯಣ ಆರಂಭವಾಯಿತು. ಜೀವನದಲ್ಲಿ ಸೋಲು-ಗೆಲುವು ಸಹಜ. ಗೆಲುವಿನ ಗುರಿ ಮುಟ್ಟುವ ತನಕ ಎಷ್ಟೇ ಸಂಕಷ್ಟ ಬಂದರು ಹೋರಾಟ ಮಾಡಿ ಗೆದ್ದು ತೋರಿಸಬೇಕು,'' ಎಂದು ಹೇಳಿದರು. ಮೈವಿವಿ ಕುಲಸಚಿವರಾದ ವಿ.ಆರ್.ಶೈಲಜಾ, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ನಿರ್ದೇಶಕ ಪ್ರೊ.ಬಿ.ಎಸ್.ಚಂದ್ರಶೇಖರ, ಚಲನಚಿತ್ರ ನಿರ್ದೇಶಕ ಮಹೇಶ್ ಮಹದೇವ್, ಮಂಜು ಮಿಲನ್ ಇದ್ದರು.

ಪ್ರಜಾವಾಣಿ ಭಾನುವಾರ • ಡಿಸೆಂಬರ್ 11, 2022





ಮೈಸೂರು ವಿಶ್ವವಿದ್ಯಾಲಯ ಮಟ್ಟದ ಅಂತರ ಕಾಲೇಜು ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಮಾನಸಗಂಗೋತ್ರಿ ಮೈಸೂರು ತಂಡ ಶನಿವಾರ ಸಮಗ್ರ ಪ್ರಶಸ್ತಿ ಪಡೆಯಿತು. ಡಾ.ಸಂಗೀತಾ ಗಜಾನನ ಭಟ್, ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಪ್ರೊ.ಸಿ.ರಾಮಸ್ವಾಮಿ, ಪ್ರೊ.ಡಿ.ಕೆ.ಶ್ರೀನಿವಾಸ, ಸವಿ ಪ್ರಕಾಶ್, ಪ್ರೊ.ಬಿ.ಎಸ್.ಚಂದ್ರಶೇಖರ, ಸುಷ್ಮಾ ಇದ್ದಾರೆ (ಎಡಚಿತ್ರ). ಯುವರಾಜ ಕಾಲೇಜು ತಂಡ ರನ್ನರ್ ಅಪ್ ಪ್ರಶಸ್ತಿ ಪಡೆಯಿತು

ಮೈಸೂರು ವಿಶ್ವವಿದ್ಯಾನಿಲಯ

UNIVERSITY OF MYSORE

## ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು – 2022

# INTER-COLLEGIATE LITERARY AND CULTURAL COMPETITIONS - 2022








Sri / ~~Kum~~ Prithvi. H.S.

Yuvaraja's College, Mysuru has

participated in the Inter-Collegiate Literary and Cultural Competitions held on 08th, 09th & 10th December, 2022 and has won First / Second / Third Prize in

SKIT

**Prof. B. S. Chandrashekhara**
Director
Directorate of Student Welfare
University of Mysore,
Manasagangothri, Mysuru

**Prof. H. Rajashekar**
Vice Chancellor
University of Mysore
Mysuru


ಮೈಸೂರು
ಅಂತರ ಕಾಲೇಜು
ಸಾಹಿತ್ಯ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು


INDEX OF HUMANITIES BLOCK
ಮೈಸೂರು ವಿಶ್ವವಿದ್ಯಾನಿಲಯ
ಅಂತರ ಕಾಲೇಜು
ಸಾಹಿತ್ಯ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು
MANASA EDUCATION TRUST (R)
NISARGA COLLEGE OF MANAGEMENT
KOLLEGAL, CHAMARAJANAGAR DISTRICT


ಮೈಸೂರು ವಿಶ್ವವಿದ್ಯಾನಿಲಯ
2022 - 23ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯ ಮಟ್ಟದ
ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು
( 2022ನೇ ಡಿಸೆಂಬರ್ 08, 09 ಮತ್ತು 10 )
ಉದ್ಘಾಟನಾ ಸಮಾರಂಭ
ದಿನಾಂಕ : 08-12-2022 ಗುರುವಾರ
ಸಮಯ : ಬೆಳಗ್ಗೆ 10-30ಕ್ಕೆ
ಸ್ಥಳ : ಮಾನವಿಕ ಸಭಾಂಗಣ
ಮಾನಸಗಂಗೋತ್ರಿ, ಮೈಸೂರು
ತಮ್ಮೆಲ್ಲರಿಗೂ ಆತ್ಮೀಯ ಸ್ವಾಗತ


ಮೈಸೂರು ವಿಶ್ವವಿದ್ಯಾನಿಲಯ




ಮೈಸೂರು ವಿಶ್ವವಿದ್ಯಾನಿಲಯ
ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು
2022 - 23ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯ ಮಟ್ಟದ
ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು
( 2022ನೇ ಡಿಸೆಂಬರ್ 08, 09 ಮತ್ತು 10 )
ಉದ್ಘಾಟನಾ


ಮೈಸೂರು ವಿಶ್ವವಿದ್ಯಾನಿಲಯ
2022 - 23ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯ ಮಟ್ಟದ
ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು
( 2022ನೇ ಡಿಸೆಂಬರ್ 08, 09 ಮತ್ತು 10 )
ಉದ್ಘಾಟನಾ ಸಮಾರಂಭ
ದಿನಾಂಕ : 08-12-2022 ಗುರುವಾರ

# UNIVERSITY OF MYSORE

## DIRECTORATE OF STUDENT WELFARE

**Manasagangotri, Mysuru**

---

## REPORT

Inter-collegiate Literary & Cultural Competitions for the academic year 2022-23 were conducted from 08th December 2022 to 10th December 2022. The competitions included various art forms like Music, Dance, Literature, Fine Arts & Theatre (19 Single Events & 07 Group events). Nearly 900 students participated from various Constituent Colleges, Affiliated Colleges & PG Departments of the University. Out of 900 students, 77 Students were selected as winners (First, Second & Third Prize for each event). 50 reputed judges took part in this event. The Programme was inaugurated by well known film Playback singer & film Actress Dr. Priyadarshini. Chief guest is Renowned film artist Dharma keerthiraj, and present with shree Mahesh Mahadev film Music Director & lyrics writer, Shree Manju Milan, Film actor & director & producer The programme was presided over by the Hon'ble Registrar V R Shylaja. KAS.

Before the Inaugural Function, teams represented by various college students, participated in the cultural procession which started from Kuvempu Statue and ended at Humanitie Auditorium. Manasagangotri, Mysuru.

The Valedictory Function was held on the evening of 10-12-2022 at EMMRC Auditorium.. Prof. V Nagesh Bettakote hon'ble Vice Chancellor Karnataka State Dr. Gangubhai Hanagal Music And Performing Arts University Mysore, as Chief Guest of this function and Prof. C Ramaswamy, Visiting Professor, Babu Jagajeevan Ram Research & Extention Center University of Mysore and Prof. D.K. Shreenivasa, Retired Professor, Yuvaraja's College, Mysore and Smt Savi Prakash, News Anchor, Chandana TV, Bangalore, were present with them and distributed the prizes and Championship trophy to the winners. The programme was presided over by Dr. Sangeetha Gajanana Bhat, Finance Officer, UOM.

2022–23ನೇ ಸಾಲಿನ ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು 2022ರ ಡಿಸೆಂಬರ್ 08, 09 ಮತ್ತು 10 ರಂದು ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾನಿಲಯದ ಅಂಗ ಮತ್ತು ಸಂಯೋಜಿತ ಕಾಲೇಜುಗಳಲ್ಲಿ, ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸುಮಾರು 900ಕ್ಕೂ ಹೆಚ್ಚು ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿವಿಧ ಕಲೆಗಳಾದ ಸಂಗೀತ, ನೃತ್ಯ, ಸಾಹಿತ್ಯ, ಲಲಿತಕಲೆಗಳು ಮತ್ತು ರಂಗಭೂಮಿ ಪ್ರಕಾರಕ್ಕೆ ಸೇರಿದ ಒಟ್ಟು 26 ಸ್ಪರ್ಧೆಗಳನ್ನು ನಡೆಸಲಾಯಿತು (19 ಏಕವ್ಯಕ್ತಿ ಸ್ಪರ್ಧೆಗಳು, 07 ಬಹುವ್ಯಕ್ತಿ ಸ್ಪರ್ಧೆಗಳು). ಈ ಸ್ಪರ್ಧೆಗಳಿಗೆ ಒಟ್ಟು 50 ಮಂದಿ ನುರಿತ ತೀರ್ಪುಗಾರರನ್ನು ನಿಯೋಜಿಸಲಾಗಿತ್ತು. ಸ್ಪರ್ಧೆಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿ, ಒಟ್ಟು 77 ಮಂದಿ ವಿದ್ಯಾರ್ಥಿಗಳು ವಿಜೇತರಾಗಿರುತ್ತಾರೆ. ಈ ಕಾರ್ಯಕ್ರಮದ ಉದ್ಘಾಟನೆಯನ್ನು ದಿನಾಂಕ: 08.12.2023ರಂದು ಖ್ಯಾತ ಬಹುಭಾಷಾ ಚಲನಚಿತ್ರ ಹಿನ್ನೆಲೆ ಗಾಯಕಿ

ಹಾಗೂ ಚಲನಚಿತ್ರ ನಟಿ ಡಾ. ಪ್ರಿಯದರ್ಶಿನಿರವರು ನೆರವೇರಿಸಿದರು. ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಖ್ಯಾತ ಚಲನಚಿತ್ರ ನಾಯಕ ನಟರಾದ ಶ್ರೀ ಧರ್ಮ ಕೀರ್ತಿರಾಜ್ ಭಾಗವಹಿಸಿದ್ದರು. ಶ್ರೀ ಮಹೇಶ್ ಮಹದೇವ್, ಖ್ಯಾತ ಚಲನಚಿತ್ರ ಸಂಗೀತ ನಿರ್ದೇಶಕರು, ಗೀತರಚನಾಕಾರರು ಹಾಗೂ ಶ್ರೀ ಮಂಜು ಮಿಲನ್, ಖ್ಯಾತ ಚಲನಚಿತ್ರ ನಟರು, ನಿರ್ದೇಶಕರು ಹಾಗೂ ನಿರ್ಮಾಪಕರು ಇವರುಗಳು ಉಪಸ್ಥಿತರಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಸಚಿವರಾದ ವಿ.ಆರ್. ಶೈಲಜ, ಕೆ.ಎ.ಎಸ್. ಅವರು ವಹಿಸಿದ್ದರು.

ಉದ್ಘಾಟನೆಗೆ ಮುನ್ನ, ವಿವಿಧ ಕಾಲೇಜುಗಳ ವಿದ್ಯಾರ್ಥಿಗಳನ್ನೊಳಗೊಂಡ ಸಾಂಸ್ಕೃತಿಕ ತಂಡಗಳ ಮೆರವಣಿಗೆಯನ್ನು ಮಾನಸಗಂಗೋತ್ರಿಯ ಕುವೆಂಪು ಪ್ರತಿಮೆಯ ಮುಂಭಾಗದಿಂದ ಆರಂಭಗೊಳಿಸಿ, ಮಾನವಿಕ ಸಭಾಂಗಣ ಇಲ್ಲಿ ಮುಕ್ತಾಯಗೊಳಿಸಲಾಯಿತು.

ಸಮಾರೋಪ ಸಮಾರಂಭವನ್ನು ದಿನಾಂಕ: 10-12-2022 ರಂದು ಆಯೋಜಿಸಲಾಗಿತ್ತು. ಮುಖ್ಯ ಅತಿಥಿಯಾಗಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಸನ್ಮಾನ್ಯ ಕುಲಪತಿಗಳು, ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು ಇವರ ಜೊತೆಯಲ್ಲಿ ಉಪಸ್ಥಿತರಿದ್ದವರು ಪ್ರೊ. ಸಿ.ರಾಮಸ್ವಾಮಿ, ಸಂದರ್ಶಕ ಪ್ರಾಧ್ಯಾಪಕರು, ಬಾಬು ಜಗಜೀವನ್ ರಾಮ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು ಪ್ರೊ. ಡಿ.ಕೆ. ಶ್ರೀನಿವಾಸ, ನಿವೃತ್ತ ಪ್ರಾಧ್ಯಾಪಕರು, ಯುವರಾಜ ಕಾಲೇಜು, ಮೈಸೂರು ಹಾಗೂ ಶ್ರೀಮತಿ ಸವಿಪ್ರಕಾಶ್, ನಿರೂಪಕರು, ಚಂದನ ವಾಹಿನಿ ದೂರದರ್ಶನ, ಬೆಂಗಳೂರು ಇವರು ಭಾಗವಹಿಸಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಮತ್ತು ಪರ್ಯಾಯ ಪಾರಿತೋಷಕವನ್ನು ಪ್ರದಾನ ಮಾಡಿದರು. ಡಾ. ಸಂಗೀತಾ ಗಜಾನನ ಭಟ್, ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

Director of Student Welfare
University of Mysore, Mysore